ವಿಜಯಪುರ | ಸಂಪುಟ 04 | ಸಂಚಿಕೆ 118 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಮಂಗಳವಾರ, ಜೂನ್, 30, 2026

"ಬಿಜೆಪಿ ಮತ್ತು ಆರ್‌ಎಸ್‌ಎಸ್‌ಗೆ ಸಂವಿಧಾನದಲ್ಲಿ ನಂಬಿಕೆ ಇಲ್ಲ. ಅವರು ಜಾತ್ಯತೀತತೆ ತತ್ವಕ್ಕೆ ವಿರುದ್ಧವಾಗಿದ್ದಾರೆ. ತಮ್ಮ ಸ್ವಂತ ಲಾಭಕ್ಕಾಗಿ, ಮತದಾರರ ಪಟ್ಟಿಯಿಂದ ತಮಗೆ ಬೇಡವಾದ ಎಲ್ಲರ ಹೆಸರುಗಳನ್ನು ಅಳಿಸಲು ಅವರು ಈ 'ವಿಶೇಷ ತೀವ್ರ ಪರಿಷ್ಕರಣೆ'ಯನ್ನು ನಡೆಸುತ್ತಿದ್ದಾರೆ"



■ ಬಿ.ಕೆ. ಹರಿಪ್ರಸಾದ್
ಕೆಪಿಸಿಸಿ ಅಧ್ಯಕ್ಷರು

# ಸಂಸದ ಜಿಗಜಿಣಗಿ ಅವರ ತೇಜೋವಧೆ ಮಾಡದಿರಿ: ಡಬ್ಬಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಸಾತ್ವಿಕ ರಾಜ-ಕಾರಣಕ್ಕೆ ಉದಾಹರಣೆಯಾಗಿರುವ ಸಂಸದ ರಮೇಶ ಜಿಗಜಿಣಗಿ ಅವರ ಬಗ್ಗೆ ಇಲ್ಲ ಸಲ್ಲದ ಆರೋಪ ಮಾಡಿ ಅವರ ತೇಜೋವಧೆ ಮಾಡಬೇಡಿ ಎಂದು ಬಿಜೆಪಿ ಓಬಿಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ವಿವೇಕಾನಂದ ಡಬ್ಬಿ ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಕಾ, ಬಾಬಾ, ಅಣ್ಣ ಎಂದು ಸಾತ್ವಿಕತನದಿಂದ ಕೂಡಿದ ಮಾತುಗಳನ್ನಾಡುವ ಸಂಸದ ರಮೇಶ ಜಿಗಜಿಣಗಿ ಲಕ್ಷ ಕೋಟಿ ರೂ.ಗೂ ಹೆಚ್ಚು ಅನುದಾನವನ್ನು ಜಿಲ್ಲೆಗೆ ತಂದಿರುವ ಕೀರ್ತಿ ಸಂಸದ ರಮೇಶ ಜಿಗಜಿಣಗಿ ಅವರಿಗೆ ಸಲ್ಲುತ್ತದೆ, ಈ ಹಿಂದಿನ ಸಂಸದರು ಮಾಡಿದ ಕಾರ್ಯವೈಖರಿ ಹಾಗೂ ಸಂಸದ ರಮೇಶ ಜಿಗಜಿಣಗಿ ಅವರ ಕಾಲಘಟ್ಟದಲ್ಲಿ ಕೈಗೊಂಡ ಕಾಮಗಾರಿಗಳನ್ನು ತುಲನೆ ಮಾಡಿ ನೋಡಿ, ಸಂಸದ ರಮೇಶ ಜಿಗಜಿಣಗಿ ಅವರು ಸಂಸದರಾಗಿದ್ದ ಅವಧಿಯಲ್ಲಿ ರೈಲ್ವೇ ಓವರ್ ಬ್ರಿಡ್ಜ್, ವಿಮಾನ ನಿಲ್ದಾಣ, ಬಹುಹಳ್ಳಿ ಕುಡಿಯುವ ನೀರು, ವಿಜಯಪುರ–ಸೊಲ್ಲಾಪೂರ ರಾಷ್ಟ್ರೀಯ ಹೆದ್ದಾರಿ ಪ್ರಗತಿ ಹೀಗೆ ಅವರ ಸಾಧನೆ ಹೇಳಲು ದಿನಗಳೇ ಬೇಕು ಎಂದರು. ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು ಡಾ.ಸುಧಾಮೂರ್ತಿ ಅವರನ್ನು ಸಿಂಪಲ್ ಸುಧಾಮೂರ್ತಿ ಎಂದು ಪದೇ ಪದೇ ಅವಹೇಳನ ಮಾಡುವ ಮನಸ್ಥಿತಿಯಿಂದ ದೂರ ಬರಬೇಕು. ನಿಮ್ಮ ಪಕ್ಕದಲ್ಲಿಯೇ ಇರುವ ನಿಮ್ಮ ಮುಖ್ಯಮಂತ್ರಿಗಳೇ ಸುಧಾಮೂರ್ತಿ ಹಾಗೂ ನಾರಾಯಣ ಮೂರ್ತಿ ಅವರ ಕಾಲಿಗೆ ಬಿದ್ದು ಆಶೀರ್ವಾದ ಪಡೆದದ್ದು ನೀವು ಮರೆತಿದ್ದೀರಾ ಎಂದು ಪ್ರಶ್ನಿಸಿದರು.

ಜಾತಿ ಜನಗಣತಿಯ ವರದಿಯನ್ನು ನಿಕಟಪೂರ್ವ ಮುಖ್ಯಮಂತ್ರಿಗಳು ತರಾತುರಿಯಲ್ಲಿ ಸಹಿ ಮಾಡಿದ್ದರೆ ಆ ಅನ್ಯಾಯದ ವಿರುದ್ಧ ಬಿಜೆಪಿ ಬೀದಿಗಿಳಿದು ಹೋರಾಟ ನಡೆಸಬೇಕಾಗುತ್ತದೆ, ಸಚಿವರ ಸಂಬಂಧಿಕರ ಮನೆಯಲ್ಲಿಯೇ ಲೋಕಾಯುಕ್ತರು ದಾಳಿ ಮಾಡುವಂತಾಗಿದೆ, ಮೊದಲು ತಮ್ಮ ಮನೆಯನ್ನು ಸಚಿವರು ಶುದ್ಧೀಕ-ರಿಸಿಕೊಳ್ಳಿ ನಂತರ ಇನ್ನೊಬ್ಬರ ಬಗ್ಗೆ ಮಾತನಾಡಿ ಎಂದರು.

ಪದ್ಮಶ್ರೀ ಪ್ರಶಸ್ತಿಗಳು ಮೊದಲು ಕೆಲವ-ರಿಗೆ ಮಾತ್ರ ಸೀಮಿತವಾಗಿದ್ದು, ಆದರೆ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರ ಎಲೆಮರೆಯ ಕಾಯಿಯಂತೆ ಇರುವ ಸಾಧಕರನ್ನು ಗುರುತಿಸಿ, ಯಾರಿಗೆ ಪದ್ಮಶ್ರೀ ಪ್ರಶಸ್ತಿ ಇದೆ ಎಂಬುದು ಗೊತ್ತಿಲ್ಲದ ನಿಸ್ವಾರ್ಥ ಸಾಧಕರನ್ನು ಗುರುತಿಸಿ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸುತ್ತಿದೆ ಎಂದರು.

ಬಿಜೆಪಿ ಮುಖಂಡರಾದ ಈರಣ್ಣ ರಾವೂರ, ಮಳುಗೌಡ ಪಾಟೀಲ, ಸಿದ್ದು ಬುಳ್ಳಾ, ಮಂಜುನಾಥ ಮೀಸೆ, ವಿಜಯ ಜೋಶಿ ಮೊದಲಾದವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಸಂಘಟನೆಗಳು ಕಾಂಗ್ರೆಸ್ ವಿರುದ್ಧ ಸಿಡಿದೇಳಲಿ

**ಮುಖಂಡರಾದ ರವಿ ವಗ್ಗೆ ಮಾತನಾಡಿ, ಎಸ್‌ಇಪಿ-ಟಿಎಸ್‌ಪಿ ಹಣವನ್ನು ಬೇರೆ ಉದ್ದೇಶಕ್ಕೆ ಬಳಕೆ ಮಾಡುವ ಮೂಲಕ ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ಜಾತಿ – ಪರಿಶಿಷ್ಟ ಸಮುದಾಯಗಳಿಗೆ ಮಾಡಿದ ಘೋರ ಅನ್ಯಾಯ, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ಚುನಾವಣೆ ಉದ್ದೇಶಕ್ಕೆ ಬಳಕೆ ಮಾಡಿಕೊಂಡಿರುವುದು ಪರಿಶಿಷ್ಟ ಪಂಗಡಗಳಿಗೆ ಮಾಡಿದ ಘೋರ ಅನ್ಯಾಯ, ಈ ಮೊಂಡು ಸರ್ಕಾರ ಈ ಹಣವನ್ನು ವಾಪಾಸ್ಸು ನೈಜ ಉದ್ದೇಶಕ್ಕೆ ಬಳಸಿಕೊಳ್ಳುವ ಕೆಲಸ ಮಾಡಲಿಲ್ಲ ಎಂದರು. ಇಷ್ಟೆಲ್ಲಾ ದೊಡ್ಡ ಅನ್ಯಾಯದ ವಿರುದ್ಧ ದಲಿತ ಸಂಘಟನೆಗಳು ಪ್ರಬಲ ಧ್ವನಿ ಎತ್ತಬೇಕು, ಅವರು ಏನೂ ಮಾಡಿಕೊಳ್ಳಲು ಸಾಧ್ಯವಿಲ್ಲ, ಸಂಘಟನೆಗಳು ಕಾಂಗ್ರೆಸ್ ಸರ್ಕಾರದ ವಿರುದ್ಧ ಸಿಡಿದೇಳಬೇಕು ಎಂದು ಒತ್ತಾಯಿಸಿದರು.**

**ಸಂಸದ ರಮೇಶ ಜಿಗಜಿಣಗಿ ಅವರ ದೂರದೃಷ್ಟಿಯ ಗಂಗಾ ಕಲ್ಯಾಣ ಯೋಜನೆ ಜಾರಿಗೆ ಅನೇಕ ತೊಂದರೆ ಅನುಭವಿಸಿದ್ದಾರೆ, ಅನೇಕ ವೈರುಧ್ಯಗಳ ಹಿನ್ನೆಲೆಯಲ್ಲಿ ಈ ಯೋಜನೆ ಜಾರಿಯಾಗಲು ಅಂದಿನ ಸರ್ಕಾರ ಒಪ್ಪದೇ ಹೋದಾಗ ರಾಜಿನಾಮೆ ನೀಡಲು ಮುಂದಾಗಿದ್ದರು, ಕೊನೆಗೆ ಸರ್ಕಾರ ಅವರ ಹೋರಾಟಕ್ಕೆ ಮಣಿದು ಈ ಯೋಜನೆಗೆ ಅಸ್ತು ಎಂದಿತು ಎಂದರು.**

# ಸದಾನಂದಗೌಡ ಅವರದ್ದೆನ್ನಲಾದ ಆಡಿಯೋ ವೈರಲ್!

## ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಬದಲಾವಣೆ ಕುರಿತು ಮಾತನಾಡಿದರೆನ್ನಲಾದ ಚರ್ಚೆ ಕುರಿತ ಆಡಿಯೊ

ಬೆಂಗಳೂರು: ರಾಜ್ಯ ಬಿಜೆಪಿಯಲ್ಲಿ ಸಡನ್ ಆಪರೇಷನ್ನಿನ ಮಾತುಗಳು ಕೇಳಿ ಬರುತ್ತಿವೆ. ಇತ್ತೀಚೆಗೆ ನಡೆದ ವಿದಾನ ಪರಿಷತ್ ಚುನಾವಣೆಯಲ್ಲಿ ಪಕ್ಷದ ಹಲ ಶಾಸಕರು ಅಡ್ಡ ಮತದಾನ ಮಾಡಿದರಲ್ಲ? ಇದಾದ ನಂತರ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ವಿಧಾನಸಭೆಯ ಪ್ರತಿಪಕ್ಷ ನಾಯಕ ಅರ್.ಅಶೋಕ್ ಅವರ ಪಟ್ಟ ಅಲುಗಾಡುತ್ತಿದೆ.

ಇದಕ್ಕೆ ಪುಷ್ಟಿ ನೀಡುವಂತೆ ವಿಜಯೇಂದ್ರ ಅವರನ್ನು ತೆಗೆದುಹಾಕುವಂತೆ ದೆಹಲಿ ನಾಯಕರಿಗೆ ಒತ್ತಾಯ ಮಾಡಿರುವ ಮಾಜಿ ಮುಖ್ಯಮಂತ್ರಿ ಡಿವಿ ಸದಾನಂದ ಗೌಡ ಅವರದ್ದು ಎನ್ನಲಾದ ಆಡಿಯೋ ವೈರಲ್ ಆಗಿದೆ.

ಬಿಜೆಪಿ ಕೇಂದ್ರ ನಾಯಕ ಪ್ರದೀಪ್ ಎಂಬುವವರ ಜೊತೆಗೆ ಡಿವಿ ಸದಾನಂದಗೌಡ ಅವರು ಇಂಗ್ಲಿಷ್ ನಲ್ಲಿ ನಡೆಸಿದ ಸಂಭಾಷಣೆ ಇದಾಗಿದ್ದು, ಇದರಲ್ಲಿ ಮೂರು ತಿಂಗಳ ಬಳಿಕ ರಾಜ್ಯಾಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ಕೆಳಗಿಳಿಸಿ ಎಂದು ಎಂಬ ಬೇಡಿಕೆ ಇಡಲಾಗಿದೆ. ಈ ಆಡಿಯೋ ಇದೀಗ ರಾಜ್ಯ ಬಿಜೆಪಿಯಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿದ್ದು, ಮತ್ತೆ ಬಣ ಬಡಿದಾಟ ಶುರುವಾಗಿದೆ.

ಬಿಜೆಪಿ ರಾಜ್ಯಾಧ್ಯಕ್ಷರಾಗಿ ಬಿವೈ ವಿಜಯೇಂದ್ರ ಅವರು ಇನ್ನು ಮೂರು ತಿಂಗಳಲ್ಲಿ ಮೂರು ವರ್ಷ ಪೂರೈಸಲಿದ್ದಾರೆ.



ಬಿಜೆಪಿ ರಾಜ್ಯಾಧ್ಯಕ್ಷರ ಅವಧಿ ಮೂರು ವರ್ಷ ಇರುವುದು ಬಿಜೆಪಿಯಲ್ಲಿ ನಡೆದುಕೊಂಡು ಬಂದ ನಿಯಮವಾಗಿದೆ.

ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್ ವರೆಗೂ ವಿಜಯೇಂದ್ರ ಮುಂದುವರೆಯಲು ಬಿಡಿ, ಬಳಿಕ ರಾಜ್ಯಾಧ್ಯಕ್ಷ ಸ್ಥಾನದಿಂದ ತೆಗೆದು ಹಾಕಿ ಎಂಬುವುದು ಆಡಿಯೋದಲ್ಲಿ ಉಲ್ಲೇಖವಾಗಿದೆ. ಈಗಲೇ ತೆಗೆದು ಹಾಕಿದ್ರೆ ಬಿಜೆಪಿ ಮತ್ತೆ ಲಿಂಗಾಯತ ವಿರೋಧಿ ಅಂತ ಟೀಕೆಗೆ ಗುರಿ ಆಗುವ ಅಪಾಯ ಇದೆ. ಇದು ಪಕ್ಷಕ್ಕೆ ಡ್ಯಾಮೇಜ್ ಆಗಬಹುದು. ಹಾಗಾಗಿ ಮುಂದಿನ ಅಕ್ಟೋಬರ್ ವರೆಗೂ ಕಾದು ವಿಜಯೇಂದ್ರ ಅವರನ್ನು ಪದವಿಯಿಂದ ತೆಗೆಯುವಂತೆ ಮನವಿ ಮಾಡಲಾಗಿದೆ.

### ನನ್ನದಲ್ಲದ ಆಡಿಯೋ-ವಿಡಿಯೋಗೆ ಉತ್ತರಿಸೊಲ್ಲವೆಂದ ಸದಾನಂದಗೌಡ



ಈ ಆಡಿಯೋ ಬಗ್ಗೆ ಪ್ರತಿಕ್ರಿಯಿಸಿದ ಮಾಜಿ ಸಿಎಂ ಸದಾನಂದಗೌಡ ಅವರು, ಆಡಿಯೋ ಕುರಿತು ನಾನು ಯಾವುದೇ ಕಾಮೆಂಟ್‌ಗಳನ್ನು ಮಾಡುವುದಿಲ್ಲ ಎಂದು ಹೇಳಿದ್ದಾರೆ.

"ಆಡಿಯೋ ಬಗ್ಗೆ ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ನನ್ನದಲ್ಲದ ಆಡಿಯೋ ಮತ್ತು ವಿಡಿಯೋಗೆ ನಾನು ಉತ್ತರಿಸುವುದಿಲ್ಲ" ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಈ ಆಡಿಯೋ ಬಗ್ಗೆ ನನಗೆ ಗೊತ್ತಿಲ್ಲ, ಹಾಗಾಗಿ ಉತ್ತರ ಕೊಡುವುದಿಲ್ಲ. ಆಡಿಯೋ ಬಗ್ಗೆ ಸತ್ಯ ಸಂಗತಿ ಹೊರಬರಲಿ. ನನ್ನ ಬಗ್ಗೆ ಬಹಳ ದಿನದಿಂದ ಚರ್ಚೆ ಆಗುತ್ತಿತ್ತು. ಕೋರ್ ಕಮಿಟಿ ಸಭೆಯಲ್ಲಿ ಕೆಲವು ಮಾತುಗಳನ್ನು ಹೇಳಿದ್ದೇನೆ. ಕೇಂದ್ರ ನಾಯಕರು, ರಾಜ್ಯ ನಾಯಕರು ಕೇಳಿದ್ರೆ ಉತ್ತರ ಕೊಡುತ್ತೇನೆ ಎಂದು ಸ್ಪಷ್ಟಪಡಿಸಿದ್ದಾರೆ.

## ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು 2026–27ನೇ ಸಾಲಿನ ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ (ಪಿಎಂಆರ್ ಬಿಪಿ) ಪ್ರಶಸ್ತಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ. ಈ ಪ್ರತಿಷ್ಠಿತ ರಾಷ್ಟ್ರೀಯ ಪ್ರಶಸ್ತಿಯನ್ನು ಅಸಾಧಾರಣ ಪ್ರತಿಭೆ ಹಾಗೂ ಸಾಧನೆಗಳನ್ನು ಮೆರೆದ ಮಕ್ಕಳಿಗೆ ಭಾರತದ ಗೌರವಾನ್ವಿತ ರಾಷ್ಟ್ರಪತಿಗಳು ನವದೆಹಲಿಯಲ್ಲಿ ನಡೆಯುವ ವಿಶೇಷ ಸಮಾರಂಭದಲ್ಲಿ ಪ್ರದಾನ ಮಾಡಲಿದ್ದಾರೆ.

18 ವರ್ಷದೊಳಗಿನ ಅರ್ಹ ಮಕ್ಕಳು ಶೌರ್ಯ, ಕ್ರೀಡೆ, ಸಮಾಜ ಸೇವೆ, ವಿಜ್ಞಾನ ಮತ್ತು ತಂತ್ರಜ್ಞಾನ, ಕಲೆ ಮತ್ತು ಸಂಸ್ಕೃತಿ ಹಾಗೂ ನಾವೀನ್ಯತೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆಗಳನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ. ಸ್ವಯಂ ನಾಮನಿರ್ದೇಶನ ಹಾಗೂ ಇತರರಿಂದ ನಾಮನಿರ್ದೇಶನ ಸಲ್ಲಿಸಲು ಅವಕಾಶವಿದೆ. ಆಸಕ್ತರು ರಾಷ್ಟ್ರೀಯ ಪ್ರಶಸ್ತಿ ಪೋರ್ಟಲ್ https://awards.gov.in ಮೂಲಕ ಮಾತ್ರ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಜುಲೈ.31 ಕೊನೆಯ ದಿನಾಂಕವಾಗಿದೆ. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ದೂರವಾಣಿ ಸಂಖ್ಯೆ 08352–295353 ಮೂಲಕ ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರ ಪ್ರಕಟಣೆ ತಿಳಿಸಿದೆ.

## ಕಲಬುರ್ಗಿ: ನಮೋಶಿ ಸರ್ಕಾರಕ್ಕೆ ಪತ್ರ

ಕಲಬುರ್ಗಿ: ಇಂದು ನಾವು ಕೃತಕ ಬುದ್ಧಿಮತ್ತೆಯ ಡಿಜಿಟಲ್ ಯುಗದಲ್ಲಿ ಬದುಕುತ್ತಿದ್ದೇವೆ. ಪ್ರತಿಯೊಂದು ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ಮುಖಾಂತರ ಡಿಜಿಟಲ್ ಕಾರ್ಯಗಳು ಆರಂಭವಾಗಿವೆ. ಶೈಕ್ಷಣಿಕ ಕ್ಷೇತ್ರದಲ್ಲಿಯು ಸಹ ಡಿಜಿಟಲ್ ತಂತ್ರಜ್ಞಾನದ ಬಳಕೆ ಹೆಚ್ಚುತ್ತಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ.

# ಆಧ್ಯಾತ್ಮ ಭಾರತೀಯರ ಉಸಿರು : ಸಂಗಮೇಶ ಬಬಲೇಶ್ವರ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: "ಜಗತ್ತಿಗೆ ವೇದೋಪನಿಷತ್ತುಗಳು ಹಾಗೂ ವಚನ ಸಾಹಿತ್ಯವನ್ನು ಕೊಟ್ಟವರು ಭಾರತೀಯರು, ಆಧ್ಯಾತ್ಮ ನಮ್ಮ ಉಸಿರು ಸಂಸ್ಕಾರಯುದ್ಧ ಜೀವನ ನಮ್ಮ ಬಾಳಿನ ಬೆಳಕು ಹಾಗಾಗಿ ನಮ್ಮ ದೇವಾಲಯಗಳು ನಮ್ಮ ಉಸಿರು ಹಾಗೂ ನಮ್ಮೆಲ್ಲರ ಬಾಳಿಗೆ ಬೆಳಕು ಚೆಲ್ಲುವ ಆದ-್ಯಾತ್ಮಿಕತೆಯ ಶ್ರದ್ಧಾ ಕೇಂದ್ರಗಳಾಗಿವೆ" ಎಂದು ಕರ್ನಾಟಕ ರಾಜ್ಯ ಬಾಲವಿಕಾಸ ಅಕಾಡೆಮಿಯ ನಿಕಟಪೂರ್ವ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಹೇಳಿದರು.

ವಿಜಯಪುರನಗರದಅಭಿವೃದ್ಧಿಬಡಾವಣೆಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಶ್ರೀ ಅಭಯಾಂಜನೇಯ ದೇವಾಲಯದ ಮೂರ್ತಿ ಪ್ರತಿಷ್ಠಾಪನೆ ಕಳಸಾರೋಹನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿ ಬಡಾವಣೆಯಲ್ಲಿರುವ ದೇವಾಲಯಗಳಲ್ಲಿ ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ಭಗವಂತನ ನಿಜವಾದ ಸ್ವರೂಪವಾಗಿರುವ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ, ಅವರ ಪ್ರತಿಭೆಯ ಅಭಿವ್ಯಕ್ತಿಗೆ ಸಹಕಾರಿಯಾಗಬಹುದಾದ ಕಾರ್ಯಕ್ರಮಗಳನ್ನು ಪ್ರತಿ ವರ್ಷ ರೂಪಿಸಬೇಕೆಂದು ಬಬಲೇಶ್ವರ ಮನವಿ ಮಾಡಿದರು.

ಕಾರ್ಯಕ್ರಮದ ಸಾನಿಧ್ಯವನ್ನು ವಹಿಸಿದ್ದ ಹುಬ್ಬಳ್ಳಿಯ ಎರಡೇತ್ತಿನ ಮಠ ಹಾಗೂ ನಿಡೋಣಿಯ ಶ್ರೀಮಠದ ಸಿದ್ದಲಿಂಗೇಶ್ವರ ಮಹಾಸ್ವಾಮಿಜಿಗಳು ಆಶೀರ್ವಚನ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೇವಸ್ಥಾನದ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಎಸ್ ಎನ್ ಅರಿಕೇರಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ವಿಜಯಪುರ ಮಹಾನಗರ ಪಾಲಿಕೆಯ ಮಹಾಪೌರ ಎಂ ಎಸ್ ಕರಡಿ, ವಿ ಡಿ ಎ ಅಧ್ಯಕ್ಷ ಡಾ. ಗಂಗಾಧರ ಸಂಬಂಣ್ಣಿ, ಮಹಾನಗರ ಪಾಲಿಕೆಯ ಸದಸ್ಯರಾದ ಪ್ರೇಮಾನಂದ ಬಿರಾದಾರ, ಗಿರೀಶ್ ಬಿರಾದಾರ ಹಾಗೂ ಅಹಿಂದ ಮುಖಂಡ ಸೋಮನಾಥ ಕಳ್ಳಿಮನಿ, ಗುರುಲಿಂಗಪ್ಪ ಅಂಗಡಿ, ಡಿ. ಜಿ ಬಿರಾದಾರ, ಉಮೇಶ್ ವಂದಾಲ, ಸಂತೋಷ ತಳಕೇರಿ, ರತ್ನಾಕರ ಕುಲಕರ್ಣಿ, ವೈಕೆ ಕುಲಕರ್ಣಿ, ಜಗದೀಶ್ ಇಂಡಿ, ಡಾ ಸೋಮು ನಿಡೋಣಿ, ಬಸವರಾಜ್ ಬಂಗಾರಿ, ಕೊಟ್ರೇಶ್ ಹರನಾಳ, ವಿರೇಶ್ ಬಂಗಾರಿ ಉಪಸ್ಥಿತರಿದ್ದರು.

ಶ್ರೀಮತಿ ಆಶಾ ನಿಡೋಣಿ, ಶ್ರೀಮತಿ ಭಾರತಿ ಮುಚ್ಚಂಡಿ ಕಾರ್ಯಕ್ರಮ ನಿರೂಪಿಸಿದರು ಶ್ರೀ ಬಾಲಾಜಿ ಸಿಂಗ್ ರಾಥೋಡ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಅಪಾರ ಸಂಖ್ಯೆಯ ಸದ್ಭಕ್ತರು ಪಾಲ್ಗೊಂಡಿದ್ದರು.

# ಎ.ಎಸ್.ಪಾಟೀಲ ರಿಗೆ ಸನ್ಮಾನಿಸಿದ ಅಮ್ಮ ಫೌಂಡೇಶನ್

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಗರದ ಪ್ರತಿಷ್ಠಿತ ಸಿಕ್ಯಾಬ್ ಶಿಕ್ಷಣ ಸಂಸ್ಥೆಯ ಪ್ರಧಾನಕಾರ್ಯದರ್ಶಿ ಎ ಎಸ್ ಪಾಟೀಲ ಅವರು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ನೇಮಕವಾದ ನಿಮಿತ್ಯ ಅಮ್ಮ ಫೌಂಡೇಶನ್ ವತಿಯಿಂದ ಶೈಕ್ಷಣಿಕ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಎಂಜಿಎಂ ಶಿಕ್ಷಣ ಸಂಸ್ಥೆಯ ಅಧ್ಯಕ್ಷ, ಖ್ಯಾತ ನ್ಯಾಯವಾದಿ ಎ ಎಂ ತಾಂಬೋಳಿ ಮಾತನಾಡಿ, ಶಿಕ್ಷಣ ಕ್ಷೇತ್ರದಲ್ಲಿ ಅಮೋಘ ಸಾಧನೆಯ ಮೂಲಕ ಜಿಲ್ಲೆಯ ಲಕ್ಷಾಂತರ ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿರುವ ಎ ಎಸ್ ಪಾಟೀಲ ಅವರು ಸಿಂಡಿಕೇಟ್ ಸದಸ್ಯರಾಗಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ. ಅತ್ಯಂತ ಸಂಕಷ್ಟದ ದಿನಗಳಲ್ಲಿ ಡಾ. ಎಸ್ ಎ ಪುಣೇಕರ ಅವರೊಂದಿಗೆ ಸೇರಿದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದರ ಮೂಲಕ ಉತ್ತಮ ಕಾರ್ಯ ಮಾಡಿದ್ದಾರೆ. ಅದರಲ್ಲೂ ಹೆಣ್ಣುಮಕ್ಕಳ ಶಿಕ್ಷಣ ಸಲುವಾಗಿ ಪ್ರತ್ಯೇಕ ಮಹಿಳಾ ಕಾಲೇಜುಗಳನ್ನು ತೆರೆದು ಶಿಕ್ಷಣ ಕ್ಷೇತ್ರದಲ್ಲಿ ವಿಶಿಷ್ಠ ಸೇವೆ ತೋ-ರಿದ್ದಾರೆ. ಇವರ ಸೇವೆ ಸಂದ ಫಲವಾಗಿದೆ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ನೂತನ ಸಿಂಡಿಕೇಟ್ ಸದಸ್ಯ ಎ ಎಸ್ ಪಾಟೀಲ ಮಾತನಾಡಿ, ಸುಮಾರು 50 ವರ್ಷಗಳ ಹಿಂದೆ ಡಾ. ಎ ಎಸ್ ಪುಣೇಕರ್ ಅವರು ಸಿಕ್ಯಾಬ್ ಶಿಕ್ಷಣ ಸಂಸ್ಥೆ ಹುಟ್ಟು ಹಾಕಿ ಬಡ ಮದ್ಯಮ ವಿದ್ಯಾರ್ಥಿಗಳಿಗೆ ಆಶಾಕಿರಣವಾಗಿದ್ದಾರೆ. ಅವರ ಗರಡಿಯಲ್ಲಿಯೇ ಕೆಲಸ ನಿರ್ವಹಿಸಿದ ಸಂತೃಪ್ತಿ ನನಗಿದೆ. ನನ್ನ ಶೈಕ್ಷಣಿಕ ಸೇವೆಗೆ ಸಿಂಡಿಕೇಟ್ ಸದಸ್ಯ ಸ್ಥಾನಕ್ಕೆ ನೇಮಕ ಮಾಡಿರುವುದು ಸಂತಸ ತಂದಿದೆ. ಹುದ್ದೆಗೆ ತಕ್ಕಂತೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತೇನೆ ಎಂದರು.

ಸನ್ಮಾನ ಕಾರ್ಯಕ್ರಮದಲ್ಲಿ ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಅಧಿಕಾರಿ ಬಿ ಎನ್ ವಡಗೇರಿ, ಅಮ್ಮ ಫೌಂಡೇಶನ್ ಗೌರವಾಧ್ಯಕ್ಷ ಯು ಐ ಶೇಖ, ಶಿಕ್ಷಕರ ಸಂಘದ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಕಬೂಲ್ ಕೊಕಟನೂರ, ಕಲಕೇರಿಯ ನಬಿಲಾಲ ಬಡೆಮ್ಮಗೋಳ ಸೇರಿದಂತೆ ಮತ್ತೀತರರಿದ್ದರು.

# ಬಿಎಲ್ಡಿಇ ರಘುಕುಲ ಸಮನ್ವಯ ಶಾಲೆ ಶೈಕ್ಷಣಿಕ ಒಡಂಬಡಿಕೆಗೆ ಸಹಿ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ನಗರದ ಪ್ರಕೃತಿ ಕಾಲನಿಯಲ್ಲಿ ಬಿ.ಎಲ್.ಡಿ.ಇ ಸಂಸ್ಥೆ– ಸಂಭವ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ವಿಕಲಚೇತನ ಮಕ್ಕಳಿಗಾಗಿ ಸಮನ್ವಯ ಶಿಕ್ಷಣ ಒದಗಿಸಲು ಪ್ರಾರಂಭಿಸಲಾದ ಬಿ.ಎಲ್.ಡಿ.ಇ ರಘುಕುಲ ಸಮನ್ವಯ ಶಾಲೆ ಶೈಕ್ಷಣಿಕ ಒಡಂಬಡಿಕೆಗೆ ಸಹಿ ಹಾಕಲಾಯಿತು.

ಬಿ.ಎಲ್.ಡಿ.ಇ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮತ್ತು ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ ಮತ್ತು ಸಂಭವ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಅಭಿನವ ರುಣವಾಲ ಸಹಿ ಹಾಕಿದರು.

ಈ ಸಂದರ್ಭದಲ್ಲಿ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯ ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ, ರಜಿಸ್ಟ್ರಾರ ಡಾ. ಆರ್. ವಿ. ಕುಲಕರ್ಣಿ, ಜಿಲ್ಲಾ ಜಿಲ್ಲಾ ವಿಕಲಚೇನತರ ಪುನರ್ವಸತಿ ಕೇಂದ್ರದ ನೋಡಲ್ ಅಧಿಕಾರಿ ಡಾ. ಈಶ್ವರ ಬಾಗೋಜಿ, ಡಾ.

ಸಂಭವ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ನ ಮುಖಂಡರಾದ ನರೇಂದ್ರ ಓಸ್ವಾಲ, ನಿರ್ಮಲ ರುಣವಾಲ, ಅಕ್ಷತ ರುಣವಾಲ, ಶ್ರೇಯಾ ರುಣವಾಲ, ಲತಾ ರುಣವಾಲ, ಅನುಷಾ ರುಣವಾಲ, ಬಿ.ಎಲ್.ಡಿ.ಇ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಎಸ್. ಎನ್. ಬೆಂತೂರ, ವೈದ್ಯರಾದ ಡಾ. ಆರ್. ಎನ್. ಕರಡಿ, ಡಾ. ರಾಜಕುಮಾರ ಬಾಗೇವಾಡಿ, ಮನಃಶಾಸ್ತ್ರಜ್ಞೆ ನಿವೇದಿತಾ, ಶ್ರವಣಶಾಸ್ತ್ರಜ್ಞೆ ರಕ್ಷಿತಾ, ತಂತ್ರಜ್ಞರಾದ ಕೆ. ಸಿ. ಮೊಹಾಂತಿ, ಡಿ. ಡಿ. ಸ್ವೈನ್, ಭೌತಚಿಕಿತ್ಸಕ (ಕುಥಿಠಣಖುಜಡಿಚಿಥಿಣ) ಎಂ. ಎ. ಕುಡಚಿ,

ಎಸ್. ಎಸ್. ಕ್ಯಾಂಪಸ್ ಆಡಳಿತಾಧಿಕಾರಿ ಐ.ಎಸ್. ಕಾಳಪ್ಪನವರ, ಸಮನ್ವರ ಶಾಲೆಯ ಮುಖ್ಯೋಪಾಧ್ಯಾಯ ಸಿದ್ದನಗೌಡ ಬಿರಾದಾರ, ಸಾಮಾಜಿಕ ಕಾರ್ಯಕರ್ತೆ ದಾನಮ್ಮ ಮಜ್ಜಿಗಿ, ಬಿ.ಎಲ್.ಡಿ.ಇ ಆಸ್ಪತ್ರೆಯ ಸಹಾಯಕ ಆಡಳಿತಾಧಿಕಾರಿ ಏಕನಾಥ ಜಾಧವ, ನರ್ಸಿಂಗ್ ಸುಪರವೈಜರ್ ಜಯಂತಿ ಮುಂತಾದವರು ಉಪಸ್ಥಿತ-ರಿದ್ದರು.

# ಮೂಢನಂಬಿಕೆ ಸಮಾಜದ ಮೌನ ಶತ್ರು

**ವೈಚಾರಿಕ ಲೇಖನ**



■ ಉದಯರಶ್ಮಿ ದಿನಪತ್ರಿಕೆ

ಮನುಷ್ಯ ಭೂಮಿಯ ಮೇಲೆ ಹುಟ್ಟಿ ಬಂದಮೇಲೆ ಬೇಟೆಯಾಡುತ್ತಾ ಬದುಕಿದ. ಕಾಲಕ್ರಮೇಣ ತನ್ನದೇ ಗುಂಪು ಮಾಡಿಕೊಂಡು ಬದುಕಲು ಪ್ರಾರಂಭ ಮಾಡಿದ. ತದನಂತರ ತನ್ನದೇ ಕುಟುಂಬ, ತನ್ನದೇ ಜೀವನ ಸಂಗಾತಿ ಮತ್ತು ತನ್ನದೇ ಸಂತತಿ ಎಂದು ಪ್ರತ್ಯೇಕ ಗೊಳಿಸಿಕೊಂಡು ಬದುಕಲು ಪ್ರಾರಂಭ ಮಾಡಿದ. ಆಗ ನಾಗ-ರಿಕತೆ ಶುರುವಾಯ್ತು.

ಆಗ ಗುಂಪುಗಳು ಊರುಗಳಾದವು. ಊರುಗಳು ನಗರಗಳಾದವು, ನಗರಗಳು ಸಮಾಜವಾಯ್ತು. ಈಗ ಸಾಮಾಜಿ-ಕ ನಿಯಂತ್ರಣ ಸವಾಲಾಯ್ತು. ಆಗ ನೀತಿ ನಿಯಮಗಳನ್ನು ಸೃಷ್ಟಿ ಮಾಡಿಕೊಂಡ. ಮನುಷ್ಯ ಯಾವ ನಿಯಮಗಳನ್ನೂ ಕೂಡಾ ದಿಕ್ಕರಿಸಿ ದೌರ್ಜನ್ಯ ಎಸಗುತ್ತಾನೆ. ಹೀಗಾಗಿ ಅದೃಶ್ಯ ದೇವರು, ದೆವ್ವ, ಆತ್ಮ, ಕರ್ಮ ಅಂತೆಲ್ಲಾ ಪರಿಕಲ್ಪನೆಗಳನ್ನು ಹುಟ್ಟುಹಾಕಿ ನೈತಿಕತೆಯ ಭಯ ಸೃಷ್ಟಿ ಮಾಡಿದ. ಆಗ ಈ ನಂಬಿಕೆಗಳ ಮೇಲೆ ಒಟ್ಟಾಗಿ ಬದುಕಲು ಸಾಧ್ಯವಾಯ್ತು. ಈ ನಂಬಿಕೆ ಎಲ್ಲರನ್ನೂ ಹಿಡಿದಿಡುವ ಶಕ್ತಿಯಾಯಿತು.





ಈಗ ನಂಬಿಕೆಯ ನಂತರವೇ ಮೂಢನಂಬಿಕೆ ಸೃಷ್ಟಿ ಪ್ರಾರಂಭವಾಯ್ತು. ಏಕೆಂದರೆ ಇತಿಹಾಸ ಅವಲೋಕಿಸಿದಾಗ ಮನುಷ್ಯ ಇನ್ನೊಬ್ಬರನ್ನು ತನ್ನ ನಿಯಂತ್ರಣದಲ್ಲಿ ಇರಿಸಿಕೊಳ್ಳುವ ಹುನ್ನಾರ ಮಾಡುತ್ತಲೇ ಬಂದಿದ್ದಾನೆ.

ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನ ಮೇಲೆ ನಿಯಂತ್ರಣ ಹೊಂದಲು ಒಂದು ಭೌತಿಕ ದೌರ್ಜನ್ಯ ಎಸಗಬೇಕು ಇಲ್ಲವೇ ತಾನೆ ಸೃಷ್ಟಿಸಿಕೊಂಡ ನಂಬಿಕೆಗಳನ್ನು ಅಪನಂಬಿಕೆಯಾಗಿ ಅಂದ್ರೆ ಮೂಢನಂಬಿಕೆಯಾಗಿ ಮನುಷ್ಯನ ಮಾನಸಿಕ ದೌರ್ಬಲ್ಯವನ್ನು ಉಪಯೋಗಿಸಿಕೊಂಡು ಇತರರ ಮೇಲೆ ಹೇರಿ ತನ್ನ ಲಾಭಕ್ಕಾಗಿ ಶೋಷಣೆ ಮಾಡಬೇಕು. ಈ ಸಂದರ್ಭದಲ್ಲಿ ಮೂಢನಂಬಿಕೆಗಳು ಸೃಷ್ಟಿಯಾದವು.

ಯಾವ ಶಕ್ತಿಗಳನ್ನು ಯಾರೂ ಇಲ್ಲಿಯವರೆಗೂ ನೋಡಿಲ್ಲ, ಯಾರೂ ಕಂಡಿಲ್ಲ ಅಂತಹ ಪರಿಕಲ್ಪನೆಗಳನ್ನು ಉಪಯೋಗಿಸಿಕೊಂಡು ಮನುಷ್ಯನಲ್ಲಿ ಭಯ ಹುಟ್ಟಿಸಿ ಶೋಷಣೆ ಮಾಡಿ ಅದನ್ನು ಉಪಯೋಗಿಸಿಕೊಂಡು ತಾನು ಲಾಭ ಪಡೆದುಕೊಳ್ಳಬೇಕು ಅಥವಾ ಇತರರ ಮೇಲೆ ನಿಯಂತ್ರಣವನ್ನು ಸಾಧಿಸಬೇಕು ಎಂಬುದು ಈ ಮೂಢನಂಬಿಕೆಗಳ ಹಿಂದಿರುವ ಉದ್ದೇಶ. ನಾವು ನೀವುಗಳು ನೋಡಿದಂತೆ ಚಿಕ್ಕವರಿರುವಾಗ ಊರಲ್ಲಿ ಒಬ್ಬ ತಾಂತ್ರಿಕ ಮನುಷ್ಯ ಇರುತ್ತಿದ್ದ. ಅವನು ಹೇಳಿದ್ದನ್ನು ನಾವೆಲ್ಲಾ ನಂಬುತ್ತಿದ್ದೆವು. ಎಲ್ಲ ಸಮಸ್ಯೆಗಳಿಗೆ ಪರಿಹಾರ ಅವನೇ ಹೇಳುವುದಾಗಿತ್ತು. ಅವನು ಹೇಳಿದ್ದನ್ನು ನಂಬಿ ಅದನ್ನು ಪ್ರಶ್ನೆ ಮಾಡದೆ ಜನರು ತಲೆತಗ್ಗಿಸಿಕೊಂಡು ಅನುಸರಿಸುತ್ತಿದ್ದದ್ದು ನಾವು ನೀವೆಲ್ಲ ಕಂಡಿದ್ದೇವೆ. ನಿಂಬೆ, ಮೆಣಸು, ದಾರ, ಅರಿಶಿಣ, ಕುಂಕುಮ ಸುತ್ತಲಿನ ಪರಿಕರಗಳನ್ನು ವಿನಿಯೋಗಿಸಿಕೊಂಡು ಬುದ್ದಿಗೆ ಮಂಕು ಬರಿಸುವ ತಂತ್ರವೇ ಮೂಢನಂಬಿಕೆ ಎಂಬುದಕ್ಕೇ ನಾವು ನೀವು ಸಾಕ್ಷಿಯಾಗಿದ್ದೇವೆ.



ಮಾನಸಿಕ ಅಸ್ವಸ್ಥನಾದ ವ್ಯಕ್ತಿಗೆ ದೆವ್ವ ಭೂತ ಹಿಡಿದಿದೆ ಅಥವಾ ದೇವರ ಕಾಟವಿದೆ ಎಂದು ಆ ಒಬ್ಬ ವ್ಯಕ್ತಿ ಹೇಳಿದಾಗ ಆ ಮೂಢನಂಬಿಕೆಯನ್ನು ನಂಬಿ ಜನರು ಅವನು ಹೇಳಿದಂತೆ ಅನುಸರಿಸುತ್ತಿದ್ದರು. ಪರಿಹಾರಕ್ಕಾಗಿ ಅವನು ಹೇಳಿದಂತೆ ಏನೆಲ್ಲ ಮಾಡುತ್ತಿದ್ದರು. ಅಲ್ಲಿ ಆರ್ಥಿಕ ಶೋಷಣೆ ಆಗುತ್ತಿತ್ತು ಕೆಲವೊಮ್ಮೆ ದೈಹಿಕ ಶೋಷಣೆ ಆಗುತ್ತಿತ್ತು. ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ತುಂಬಾ ಪ್ರಖ್ಯಾತ ಜ್ಯೋತಿಷಿಯೊಬ್ಬ ಅನೇಕ ರಾಜಕೀಯ ವ್ಯಕ್ತಿಗಳನ್ನು, ಅನೇಕ ಪ್ರಖ್ಯಾತ ಪ್ರಭಾವಿ ಹೆಣ್ಣು ಮಕ್ಕಳನ್ನು ಶೋಷಣೆ ಮಾಡಿದ್ದು ಜಗಜ್ಜಾಹಿರವಾಗಿದೆ. ಇದು ಸಂಪೂರ್ಣ ಮೂಢನಂಬಿಕೆಯ ಪ್ರಮಾದ.

ಇವತ್ತಿನ ಮೊಬೈಲ್ ಯುಗದಲ್ಲಿ ನಾವಿದ್ದರೂ, ಸಾಕಷ್ಟು ವೈಜ್ಞಾನಿಕ ಮನೋಭಾವ ಬೆಳೆದಿದ್ದರೂ ಇಂತಹ ಮೂಢನಂಬಿಕೆಗಳ ವ್ಯಾಪ್ತಿಗೆ ಒಳಗಾಗಿ ನಮ್ಮ ವಿವೇಚನೆಯನ್ನು ಕಳೆದುಕೊಂಡು ಹರಕೆಯ ಕುರಿಯಾಗುತ್ತಿದ್ದೇವೆ. ಒಬ್ಬ ವಿಜ್ಞಾನಿ ಅಥ-ವಾ ತತ್ವಜ್ಞಾನಿಯನ್ನು ನಂಬುವುದಕ್ಕಿಂತ ತಾಂತ್ರಿಕನನ್ನು, ಕೈ ನೋಡುವವನನ್ನು, ರಸ್ತೆಯ ಬೀದಿಯಲ್ಲಿ ಕುಳಿತು ಗಿಳಿ ಶಾಸ್ತ್ರ ಹೇಳುವವನನ್ನು ನಾವು ನಂಬುತ್ತೇವೆ ಎಂಬುದು ವಿಷಾದನೀಯ.

ಆಜ್ಯೋತಿಷಿಯನ್ನು ಸೇರಿದಂತೆ ಅಥವಾ ಮಾಟ ಮಂತ್ರ ಮಾಡುವ ಯಾವುದೇ ವ್ಯಕ್ತಿಯನ್ನು ಈ ಸಾವು ನೋವು ಕಷ್ಟಗಳು ಯಾರನ್ನೂ ಬಿಟ್ಟಿಲ್ಲ. ಮೂಢನಂಬಿಕೆಗಳನ್ನು ಹೇರುವವನು ಕೂಡ ಸಾವಿಗೀಡಾಗುತ್ತಾನೆ, ರೋಗಗ್ರಸ್ತನಾಗುತ್ತಾನೆ. ಎಲ್ಲವನ್ನು ಪರಿಹಾರ ಮಾಡುವುದಾಗಿದ್ದರೆ ಅವನು ಯಾಕೆ ಬಳಲಬೇಕು?!

ಇಂತಹ ಮೂಢನಂಬಿಕೆಗಳನ್ನು ಮೌನವಾಗಿ ಇಂದಿಗೂ ನಮ್ಮ ಸಮಾಜ ಒಪ್ಪಿಕೊಂಡು ಅಲ್ಲಲ್ಲಿ ಬಳಲುತ್ತಿದೆ ಎಂದಾದರೆ ಈ "ಮೂಢನಂಬಿಕೆ ಸಮಾಜದ ಮೌನ ಶತ್ರು". ಶಿಕ್ಷಣ ವೈಜ್ಞಾನಿಕ ವೈಚಾ-ರಿಕತೆಗೆ ಬೆಳಕು ಚೆಲ್ಲುವ ಸಾಧನವಾಗಿದೆ. ನಾವು ಶಿಕ್ಷಣ ಪಡೆದುಕೊಂಡರೂ ಆಧ-ಾರವಿಲ್ಲದ ಮೂಢನಂಬಿಕೆಗಳನ್ನು ನಾವು ನಂಬುವುದಾದರೆ ನಾವು ಕೂಡ ಈ ಸಮಾಜಕ್ಕೆ ಮೌನವಾಗಿಯೇ ಅನ್ಯಾಯ ಮಾಡಿದಂತೆ. ಸಮಾಜದ ಮೌನ ಶತ್ರು ಈ ಮೂಢನಂಬಿಕೆಗೆ ಇಂಬು ಕೊಟ್ಟಂತೆ.

ಎಲ್ಲಿಯವರೆಗೆ ನಮ್ಮ ವಿವೇಚನೆಯನ್ನು ಮುಂದಿಟ್ಟುಕೊಂಡು ಆ ಸಮಾಜದಲ್ಲಿ ನೋಡುವುದಿಲ್ಲವೋ ಅಲ್ಲಿವರೆಗೂ ನಾವು ಮೂಢನಂಬಿಕೆಗಳಿಗೆ ಬಲಿಯಾಗುತ್ತೇವೆ.

ಸಮಾಜದ ಈ ಮೌನ ಶತ್ರುವನ್ನು ಮೌನವಾಗಿ ಜ್ಞಾನದ ಬೆಳಕಿನಿಂದ ನಾವು ಒದ್ದೋಡಿಸಬೇಕಿದೆ. ಜಾಗೃತರಾಗೋಣ.

ಲೇಖನ
– ಡಾ.ರಾಜಶೇಖರ ನಾಗೂರ
ಸಂಚಾಲಕರು
ನಮ್ಮ ಕಥಾ ಅರಮನೆ



# ಸಾಧನೆ ಮಾಡುವ ಮನಸ್ಸಿದ್ದರೆ ಅಂಗವೈಕಲ್ಯ ಲೆಕ್ಕಕ್ಕೆ ಬರೊಲ್ಲ :ಉಮರಾಣಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ದೇವರು ನನಗೆ ದೃಷ್ಟಿ ಕೊಟ್ಟಿದ್ದರೆ ಬಹುಶಃ ಇಂತಹ ಸಾಧನೆ ಮಾಡುವ ಧೈರ್ಯ ಮಾಡುತ್ತಿರಲಿಲ್ಲ. ನಮ್ಮಲ್ಲಿರುವ ಸಮಸ್ಯೆಗಳು ನಮ್ಮ ಸಾಧನೆಗೆ ಪೂರಕವಾಗಬೇಕೆ ಹೊರತು ಮಾರಕವಾಗಬಾರದು. ಸಾಧನೆ ಮಾಡುವ ಮನಸಿದ್ದರೆ ಸರ್ವ ಸಿದ್ಧಿಯಾಗುತ್ತದೆ ಎಂದು ಮಾನವ ಕಂಪ್ಯೂಟರ್ ಖ್ಯಾತಿಯ ಬಸವರಾಜ ಉಮರಾಣಿ ಹೇಳಿದರು.



ನಗರದ ಎಕ್ಸಲಂಟ್ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಒಂದು ದಿನದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು; ಗಣಿತ ಎನ್ನುವುದು ಹಲವ-ರಿಗೆ ಕಬ್ಬಿಣದ ಕಡಲೆಯಾದರೆ ಕೆಲವರಿಗೆ ಅದು ಎಲ್ಲದಕ್ಕಿಂತಲೂ ಸಾಮಾನ್ಯವಾದ ವಿಷಯವಾಗಿ ಕಾಣುತ್ತದೆ. ಅದಕ್ಕೆ ಕಾರಣ ಆ ವಿಷಯದ ಮೇಲಿರುವ ಅಕ್ಕರೆ. ಯಾವುದನ್ನು ನಾವು ಇಷ್ಟಪಟ್ಟು ಮಾಡುತ್ತೇವೆಯೋ ಅದು ಎಂದಿಗೂ ನಮಗೆ ಬೇಸರ ಮೂಡಿಸುವುದಿಲ್ಲ. ಬದುಕಿನಲ್ಲಿ ಯಾವುದನ್ನು ಕೊರತೆ ಎಂದು ತಿಳಿದುಕೊಳ್ಳುತ್ತೇವೆಯೋ ಅದು ಎಂದಿಗೂ ನಮಗೆ ನೆಮ್ಮದಿ ನೀಡುವುದಿಲ್ಲ. ಅದರ ಬದಲಿಗೆ ಕೊರತೆಯನ್ನೇ ಬದುಕಿನ ಒರತೆಯನ್ನಾಗಿ ಮಾಡಿಕೊಂಡು ಹೆಜ್ಜೆ ಹಾಕಿದ್ದೇ ಆದಲ್ಲಿ ಬಾಳು ಹಸಿರಾಗುತ್ತದೆ. ನಾವಿಲ್ಲಿ ಬಂದಿದ್ದು ಸಾಧನೆ ಮಾಡುವುದಕ್ಕಾಗಿಯೇ ಹೊರತು ಸಂಕಟ ಪಟ್ಟುಕೊಳ್ಳುವುದಕ್ಕಲ್ಲ. ಸವಾಲು ಹಾಕುವ ಜನಗಳ ಎದುರಿಗೆ ಜವಾಬು ನೀಡುತ್ತಲೇ ಬದುಕುವುದನ್ನು ಕಲಿತಾಗ ಮಾತ್ರ ಬದುಕಿನಲ್ಲಿ ಏನಾದರು ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಕು-ರಿತು ಮಾತನಾಡಿದ ಪ್ರಾಂಶುಪಾಲ ಮಂಜುನಾಥ ಮ. ಜುನಗೊಂಡ ಅವರು; ಕಣ್ಣಿಲ್ಲದ ವ್ಯಕ್ತಿ ಇಷ್ಟೆಲ್ಲ ಮಾಡುವಾಗ ದೇವರು ನಮಗೆ ಎಲ್ಲವನ್ನು ಸರಿಯಾಗಿ ಇಟ್ಟಿದ್ದಾನೆ. ಹೊಸ ಶತಮಾನಕ್ಕೆ ಮುನ್ನುಡಿ ಬರೆಯುವ ಅವಕಾಶ ಕೊಟ್ಟಿದ್ದಾನೆ. ಅದನ್ನು ಸಮರ್ಪಕವಾಗಿ ಬಳಸಿಕೊಂಡು ಅಪ್ಪ ಅಮ್ಮನ ಆಸೆಯನ್ನು ಈಡೇ-ರಿಸುವುದರ ಕಡೆಗೆ ಹೆಜ್ಜೆ ಹಾಕಬೇಕೆ ಹೊರತು ನನ್ನಿಂದ ಏನಾಗುತ್ತದೆ. ನಾನೇನು ಮಾಡಬಲ್ಲೆ ಎಂದುಕೊಂಡು ಅಳುತ್ತ ಕುಳಿತುಕೊಳ್ಳಬಾರದು. ಎಲ್ಲಿ ನೋವಿದೆಯೋ ಅಲ್ಲಿಯೇ ಗೆಲುವಿದೆ ಎನ್ನುವುದನ್ನು ಎಂದಿಗೂ ಮರೆಯಬಾರದು ಎಂದು ಹೇಳಿದರು.

ಶೈಕ್ಷಣಿಕ ಸಂಯೋಜಕ ಮಂಜುನಾಥ ತುಮ್ಮರಮಟ್ಟಿ ಸೇರಿದಂತೆ ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿ ನಿಲಯದ ಮುಖ್ಯಸ್ಥರು, ನಿಲಯಪಾಲಕರು ಉಪಸ್ಥಿತರಿದ್ದರು.

ಆಂಗ್ಲ ಉಪನ್ಯಾಸಕ ಮುಸ್ತಾಕ ಮಲಘಾಣ ಕಾರ್ಯಕ್ರಮವನ್ನು ನಿರೂಪಿಸಿದರು.



## ಸಾರ್ಥಕ ಗೆಳೆಯರ ಬಳಗದಿಂದ 1 ದಿನದ ಪ್ರಸಾದ ವ್ಯವಸ್ಥೆಗೆ ಸಜ್ಜು

# ಜುಲೈ 19 ರಿಂದ 29 ರವರೆಗೆ ಶ್ರೀ ಖಾಸ್ಗತೇಶ್ವರ ಜಾತ್ರೆ

■ ಉದಯರಶ್ಮಿ ದಿನಪತ್ರಿಕೆ

ತಾಳಿಕೋಟೆ: ರಾಜ್ಯದ ಪ್ರಮುಖ ಮಠಗಳಲ್ಲಿ ಒಂದಾದ ತಾಳಿಕೋಟೆಯ ಶ್ರೀ ಖಾಸ್ಗತೇಶ್ವರ ಮಠದ ಶ್ರೀ ಖಾಸ್ಗತೇಶ್ವರ ಜಾತ್ರೋತ್ಸವವು ಜುಲೈ 19 ರಿಂದ 29 ರವರೆಗೆ ವಿಜೃಂಭಣೆಯಿಂದ ಜರುಗಲಿದೆ.

ಈ ಜಾತ್ರೋತ್ಸವದಲ್ಲಿ ಒಂದು ದಿನದ ಪ್ರಸಾದ ವ್ಯವಸ್ಥೆ ಭಕ್ತಾದಿಗಳ ಕುರಿತು ಮಾಡಲು ಮುಂದಾಗಿದ್ದ 1986 ನೇ ಸಾಲಿನಲ್ಲಿ ಶ್ರೀ ಖಾಸ್ಗತೇಶ್ವರ ಪ್ರೌಢಶಾಲೆಯಲ್ಲಿ ಶಿಕ್ಷಣ ಪಡೆದ ಈ ಸಾರ್ಥಕ ಗೆಳೆಯರ ಬಳಗ ರವಿವಾರರಂದು ಶ್ರೀಗಳಿಗೆ ಭೆಟ್ಟಿ ನೀಡಿ ತಾವು ಮಾಡಲಿರುವ ಎರಡನೇ ಸಲದ ಪ್ರಸಾದದ ವ್ಯವಸ್ಥೆ ಕುರಿತು ಶ್ರೀಗಳಿಗೆ ತಿಳಿಸಿದರು.

ಶ್ರೀ ಖಾಸ್ಗತೇಶ್ವರ ಜಾತ್ರೋತ್ಸವ ಕು-ರಿತು ಸಪ್ತಭಜನೆಯು ಜುಲೈ 19 ರಂದು ಪ್ರಾರಂಭಗೊಳ್ಳಲಿದ್ದು 26 ರಂದು ಮೊಸರು ಗಡಿಗೆ ಒಡೆಯುವ ಕಾರ್ಯಕ್ರಮ ಜರುಗಲಿದೆ ಅಂ-ದೇ ಶ್ರೀ ಮಠದ ವತಿಯಿಂದ ಮಹಾಪ್ರಸಾದ ಜರುಗುವದೆಂದು ಶ್ರೀಗಳು ತಿಳಿಸಿದರು.

ಜುಲೈ 27 ರಂದು ಆನೆ ಅಂಬಾರಿ ಮೇಲೆ ಶ್ರೀ ಖಾಸ್ಗತೇಶ್ವರರ ಹಾಗೂ ಶ್ರೀ ವಿರಕ್ತಶ್ರೀಗಳ ಉತ್ಸವ ಮೂರ್ತಿಗಳ ಭವ್ಯ ಮೆರವಣಿಗೆ ಜರುಗುವದಲ್ಲದೇ ಅಂದೇ ಸಾಯಂಕಾಲ ಶ್ರೀ ಖಾಸ್ಗತೇಶ್ವರರ ಮಹಾ ರಥೋತ್ಸವ ಜರುಗಲಿದೆ. 29 ರಂದು ಕಳಸ ಇಳಿಸುವ ಕಾರ್ಯಕ್ರಮದೊಂದಿಗೆ ಜಾತ್ರೋತ್ಸವ ಮಂಗಲಗೊಳ್ಳಲಿದೆ ಎಂದು ಮಠದ ಶ್ರೀಗಳಾದ ಸಿದ್ದಲಿಂಗದೇವರು ಸಾರ್ಥಕ ಗೆಳೆಯರ ಬಳಗಕ್ಕೆ ಜುಲೈ 25 ರಂದು ಪ್ರಸಾದ ವ್ಯವಸ್ಥೆ ಮಾಡಲು ಸೂಚಿಸಿದರು.

ಈ ಸಮಯದಲ್ಲಿ ಶ್ರೀ ಖಾಸ್ಗತೇಶ್ವರ ಮಠದ ಉಸ್ತುವರಿಯಾದ ವೇ॥ ಮುರುಘೇಶ ವಿರಕ್ತಮಠ, ಸಾರ್ಥಕ ಗೆಳೆಯರ ಬಳಗದ ಸನೀಲ ಪಾಟೀಲ, ಪ್ರಕಾಶ ನಿಡಗುಂದಿ, ಕಾಶೀನಾಥ ಸಜ್ಜನ, ಮಹಾಂತೇಶ ಸರಶೆಟ್ಟಿ, ಅಶೋಕ ಪಾಟೀಲ, ಅಪ್ಪು ಗೋನಾಳ, ವಿಶ್ವನಾಥ ಬಡದಾಳಿ, ನಾರಾಯಣ ಸುಬೇದಾರ, ಶಶಿಕಾಂತ ದೇಶಪಾಂಡೆ, ರಮೇಶ ಸಾಲಂಕಿ, ರಾಮಸ್ವರೂಪ ಅಗರವಾಲ, ರಾಘವೇಂದ್ರ ಅಗಡಿ, ಕಿರಣ ನಿಡಗುಂದಿ, ಸತ್ಯನಾರಾಯಣ ತಾಳಪಲ್ಲೆ ಮೊದಲಾದವರು ಶ್ರೀಗಳ ಆಶೀರ್ವಾದ ಪಡೆದು ತಾವು ಮಾಡುವ ಪ್ರಸಾದದ ವ್ಯವಸ್ಥೆಗೆ ಅನುಮತಿ ಕೋರಿದರು.

# ತಾಳಿಕೋಟೆ: ಭಾವೈಕ್ಯತೆಯೊಂದಿಗೆ ಜರುಗಿದ ಮೊಹರಂ ಹಬ್ಬ

■ ಉದಯರಶ್ಮಿ ದಿನಪತ್ರಿಕೆ

ತಾಳಿಕೋಟೆ: ಮುಸ್ಲಿಂ ಸಮುದಾಯದ ಪ್ರಮುಖ ಹಬ್ಬಗಳಲ್ಲಿ ಮೊಹರಂ ಹಬ್ಬ ಒಂದಾಗಿದ್ದು ರಂಜಾನ್ ನಂತರ ಎರಡನೇ ಪವಿತ್ರ ತಿಂಗಳೆಂದು ನಂಬಲಾಗಿದೆ ಯುದ್ದ ಮಾಡುವದನ್ನು ಅಲ್ಲಾನು ನಿಷೇದಿಸಿದ ಸಮಯವೇ ಮೊಹರಂ ಎಂದು ನಂಬಲಾಗಿದೆ.



ಶುಕ್ರವಾರರಂದು ಪಟ್ಟಣದಲ್ಲಿ ಮೊಹರಂ ಹಬ್ಬ ಕುರಿತು ವಿವಿದ ಬಡಾವಣೆಗಳಲ್ಲಿ ಪ್ರತಿಷ್ಠಾಪಿಸಲಾದ ದೇವರ ದಫನ್ ಕಾರ್ಯಕ್ರಮವು ಅಸಂಖ್ಯಾತ ಭಕ್ತರ ಜನದಟ್ಟಣೆಯಲ್ಲಿ ಜರುಗಿತಲ್ಲದೇ ಬಾವೈಕ್ಯತೆಯೊಂದಿಗೆ ಜರುಗಿದ ಈ ಹಬ್ಬ ಕುರಿತು ಪ್ರತಿಷ್ಠಾಪಿಸಲಾದ ದೇವರಿಗೆ ಎಡೆ, ಕಾಯಿ, ಕರ್ಪೂರ, ಲೋಬಾನ, ಸಕ್ಕರೆಯನ್ನು ಸಹ ಈ ಹಿಂದಿನಿಂದಲೂ ಸಾಗಿಬಂದ ಪದ್ದತಿಯಂತೆ ಹಿಂದೂ ಜನಾಂಗದವರೂ ದೇವರಿಗೆ ನೀಡಿ ಭಕ್ತಿಭಾವ ಮೆರೆದರು.

ಪಟ್ಟಣದ ಮಕಾಂದಾರ ಗಲ್ಲಿ, ಬೇಪಾರಿ ಗಲ್ಲಿ, ಮಾಲಗಲ್ಲಿ, ಬಿಸ್ತಿ ಗಲ್ಲಿ, ಪಂಚೆಸೈಯದ್ ದರ್ಗಾ, ದವಲ್ ಮಲೀಕ್ ದರ್ಗಾ, ಮಿಲತ್ ನಗರ, ಆಶ್ರಯ ಕಾಲನಿ ಒಳಗೊಂಡು ಸುಮಾರು 6 ಬಡಾವಣೆಗಳಲ್ಲಿ ಮೊಹರಂ ದೇವರ ಪ್ರತಿಷ್ಠಾಪನೆ ಮಾಡಲಾಗಿತ್ತು.

ತಾಳಿಕೋಟೆ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ 64 ಗ್ರಾಮಗಳನ್ನೊಳಗೊಂಡು 271 ಪಂಜಗಳು, 56 ಡೋಲಿಗಳು, ಅಲ್ಲದೇ ತಾಳಿಕೋಟೆಯಲ್ಲಿ 6 ಬಡಾವಣೆಗಳಲ್ಲಿ ದೇವರು ಪ್ರತಿಷ್ಠಾಪಿಸಲಾಗಿತ್ತು.

ಒಟ್ಟಿನಲ್ಲಿ ಮೊಹರಂ ಹಬ್ಬವು ಭಾವೈಕ್ಯತೆಯೊಂದಿಗೆ ಶಾಂತ ರೀತಿಯಲ್ಲಿ ಜರುಗಿತು.

ತಾಳಿಕೋಟೆಯಲ್ಲಿ ಕತ್ರಿ ಬಜಾರ್ ಪಂಚೆಸೈಯದ್ ದರ್ಗಾ ಮುಂಭಾಗದಲ್ಲಿ ಜನದಟ್ಟಣೆಯು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಈ ಮೊಹರಂ ಹಬ್ಬದಲ್ಲಿ ಪ್ರತಿಷ್ಠಾಪಿಸಲಾದ ದೇವರನ್ನು ನೋಡಿ ಕಣ್ತುಂಬಿಕೊಂಡರು.

ಈ ಮೊಹರಂ ಹಬ್ಬ ಕುರಿತು ಆಯ್. ಆರ್.ಬಿ. ಪೋಲೀಸ್ ತುಕಡಿಯನ್ನು ನಿಯೋಜಿಸಲಾಗಿ-ತ್ತು. ಡಿಎಸ್‌ಪಿ ನಂದಾರೆಡ್ಡಿ, ಸಿಪಿಐ ಮೊಹ್ಮದಮೊಸಿನ್ ಇವರ ಮಾರ್ಗದರ್ಶನದೊಂದಿಗೆ ಪಿಎಸ್‌ಐ ಜ್ಯೋತಿ ಖೋತ್, ಅಪರಾಧ ವಿಭಾಗ ಪಿಎಸ್‌ಐ ಪಡಶೆಟ್ಟಿ ತಮ್ಮ ಸಿಬ್ಬಂದಿಗಳೊಂದಿಗೆ ಬಂದೋಬಸ್ತ್ ಏರ್ಪಡಿಸಿದ್ದರು.



**ಕಲಬುರಗಿ: ನಗರದ ವಾರ್ಡ್ ನಂಬರ್ 7 ರಲ್ಲಿ ಇಂದು ಮನ್ ಕಿ ಬಾತ್ ಪ್ರಧಾನಮಂತ್ರಿ ಅವರ ಕಾರ್ಯಕ್ರಮವನ್ನು ಆಲಿಸಲಾಯಿತು. ಈ ಕಾರ್ಯಕ್ರಮವನ್ನು ಬೂತ್ ನಂಬರ್ 28ರ ದೇವೇಂದ್ರ ದೇಸಾಯಿ ಕಲ್ಲೂರು ಅವರ ಮನೆಯಲ್ಲಿ ಆಯೋಜಿಸಲಾಗಿತ್ತು ಈ ಸಂದರ್ಭದಲ್ಲಿ ಜಗನ್ನಾಥ್ ಮಾಸ್ಟರ್, ಜಗನ್ನಾಥ್ ಧರ್ಮಪುರ್, ಚೆನ್ನಪ್ಪ ಕಣ್ಣಿ, ವಿನೋದ್ ಕಾಂಬಳೆ ರಾಕೇಶ್ ಮಡಿವಾಳ ರಾಮದಾಸ್ ಟೈಲರ್ ಅಪ್ಪರಾಯ ಸೂರ್ಯಕಾಂತ್ ಗುತ್ತೇದಾರ್ ಸೇರಿದಂತೆ ಹಲವರಿದ್ದರು.**

# 5 ವರ್ಷದೊಳಗಿನ ಮಗುವಿಗೆ ಪೋಲಿಯೊ ಲಸಿಕೆ ಹಾಕಿಸಿ :ಅವಜಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಎಲ್ಲ ಸಾರ್ವಜನಿಕರು ತಮ್ಮ 5 ವರ್ಷದೊಳಗಿನ ಮಕ್ಕಳಿಗೆ ಎರಡು ಹನಿ ಪೋಲಿಯೋ ಲಸಿಕೆಯನ್ನು ತಪ್ಪದೆ ಹಾಕಿಸಬೇಕೆಂದು ವಿಜಯಪುರ್ ತಾಲೂಕ ಪಂಚ ಗ್ಯಾರಂಟಿ ಸಮಿತಿ ಅಧ್ಯಕ್ಷರಾದ ರಾಜಶೇಖರ ಅವಜಿ ತಿಳಿಸಿದರು.

ಶಿವಣಗಿ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಹಡಗಲಿ ತಾಂಡಾ ನಂಬರ್ ಮೂರರ ಸರ್ಕಾರಿ ಪ್ರಾಥಮಿಕ ಶಾಲಾ ಆವರಣದಲ್ಲಿ ಹಮ್ಮಿಕೊಂಡ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು, ಮಗುವಿಗೆ ಎರಡು ಹನಿ ಪೊಲಿಯೋ ಲಸಿಕೆಯನ್ನು ಹಾಕುವ ಮುಖಾಂತರ ಉದ್ಘಾಟಿಸಿ ಮಾತನಾಡಿದವರು, ನಮ್ಮ ಭಾರತ ದೇಶ ಪೋಲಿಯೋ ಮುಕ್ತ ದೇಶವಾಗಿದೆ, ಕೆಲವು ದೇಶಗಳಲ್ಲಿ ಪೋಲಿಯೊ ಇನ್ನು ಬೀತಿಯನ್ನುಂಟು ಮಾಡುತ್ತಿದ್ದು, ಮುನ್ನೆಚ್ಚರಿಕೆಯಾಗಿ ಈ ಲಸಿಕಾ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡಿದೆ, ಪೋಲಿಯೋ ಒಂದು ಶಾಶ್ವತ ಅಂಗವೈಕಲ್ಯವನ್ನು ಉಂಟುಮಾಡಬಲ್ಲ ಅಪಾಯಕಾರಿ ರೋಗ. ಕೇವಲ ಎರಡು ಹನಿ ಲಸಿಕೆ ನಿಮ್ಮ ಮಗುವಿನ ಆರೋಗ್ಯಕರ ಭವಿಷ್ಯಕ್ಕೆ ಭದ್ರತೆ ನೀಡುತ್ತದೆ. ಈ ಮೊದಲು ಮಗುವಿಗೆ ನೀವು ಎಷ್ಟೇ ಬಾರಿ ಪೋಲಿಯೋ ಲಸಿಕೆಯನ್ನು ಹಾಕಿಸಿದ್ದರು ಕೂಡ, ಈಗ ಮತ್ತೆ 5 ವರ್ಷದ ಒಳಗಿನ ಎಲ್ಲ ಮಕ್ಕಳಿಗು ಎರಡು ಹನಿ ಪೋಲಿಯೋ ಲಸಿಕೆಯನ್ನು ಹಾಕಿಸಬೇಕು, ಪೋಲಿಯೋ ಲಸಿಕೆ ಸಂಪೂರ್ಣ ಸುರಕ್ಷಿತ ಲಸಿಕೆಯಾಗಿದೆ. ಎಲ್ಲರೂ ತಮ್ಮ ಮಕ್ಕಳಿಗೆ ಪೋಲಿಯೋ ಲಸಿಕೆಯನ್ನು ಹಾಕಿಸುವುದರಿಂದ ಸಂಪೂರ್ಣ ರಕ್ಷಣೆ ಪಡೆಯಬಹುದಾಗಿದೆ. ಪೋಲಿಯೋ ವಿರುದ್ಧ ನಿರಂತರ ಗೆಲುವು ಮುಂದುವರಿಸೋಣ, ಗ್ರಾಮದ ಎಲ್ಲ ಸಾರ್ವಜನಿಕರ ಮತ್ತು ವಿವಿಧ ಇಲಾಖೆಯ ಸಹಕಾರದಿಂದ, ಆರೋಗ್ಯ ಇಲಾಖೆ ಜೊತೆ ಗುಡಿ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಯಶಸ್ವಿಗೊಳಿಸೋಣ ಎಂದರು.



ಪಲ್ಸ್ ಪೋಲಿಯೊ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾಜಿ ತಾಲೂಕು ಪಂಚಾಯತ್ ಸದಸ್ಯರಾದ ಶಂಕರ್ ರಾಠೋಡ ಮಾಜಿ ಗ್ರಾಮ ಪಂಚಾಯತ್ ಸದಸ್ಯರಾದ ಚೈತನ್ಯ ರಘುನಾಥ ರಾಠೋಡ ಹಾಗೂ ಆರೋಗ್ಯ ನಿರೀಕ್ಷಣಾಧಿಕಾರಿ ಆರ್ ಎಸ್ ಪಾಟೀಲ, ಸಮುದಾಯ ಆರೋಗ್ಯ ಅಧಿಕಾರಿ ಲಕ್ಷ್ಮಿ ಅಗಸಿಬಾಗಿಲ ಆಶಾ ಕಾರ್ಯಕರ್ತೆಯರಾದ ಬೇಬಿಬಾಯಿ ಪವಾರ, ಅಂಗನವಾಡಿ ಕಾರ್ಯಕರ್ತೆಯರಾದ ಸೋನಾಬಾಯಿ ನಾಯಕ್ , ಹಡಗಲಿ ತಾಂಡಾ ಗ್ರಾಮದ ಎಲ್ಲ ಸಾರ್ವಜನಿಕರು , ಹಿರಿಯರು ಹಾಗೂ ಮಕ್ಕಳು ಪಾಲ್ಗೊಂಡಿದ್ದರು.

# ಕವಿ, ಕಲಾವಿದರು ಸಂಸ್ಕೃತಿಯನ್ನು ಉಳಿಸಬೇಕು :ರಾಜುಗೌಡ

■ ಉದಯರಶ್ಮಿ ದಿನಪತ್ರಿಕೆ

ಬಸವನಬಾಗೇವಾಡಿ: ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಮುಂದುವರಿದಿದ್ದರೂ ನಮ್ಮ ದೇಶದ ಸಂಸ್ಕೃತಿ, ಸಂಸ್ಕಾರ ಮರೆತುಹೋಗುತ್ತಿರುವುದು ವಿಷಾದನೀಯ. ಈ ನಿಟ್ಟಿನಲ್ಲಿ ಕವಿ-ಕಲಾವಿದರು ನಮ್ಮ ದೇಶದ ಸಂಸ್ಕೃತಿ-ಸಂಸ್ಕಾರವನ್ನು ಉಳಿಸಿ ಬೆಳೆಸಬೇಕೆಂದು ದೇವರಹಿಪ್ಪರಗಿ ಶಾಸಕ ಭೀಮನಗೌಡ(ರಾಜುಗೌಡ) ಪಾಟೀಲ ಹೇಳಿದರು.

ಪಟ್ಟಣದ ಗಣೇಶ ನಗರದ ಯಲ್ಲಾಲಿಂಗೇಶ್ವರ ಮಠದ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ರಾಜ್ಯ ನಾಟಕ ಬರಹಗಾರರ ಕವಿಗಳ ಸಂಘವು ಭಾನುವಾರ ಹಮ್ಮಿಕೊಂಡಿದ್ದ ಗಾನಯೋಗಿ ಡಾ.ಪಂಚಾಕ್ಷರಿ ಪುಟ್ಟರಾಜ ಗವಾಯಿಗಳ ಪುಣ್ಯಸ್ಮರಣೋತ್ಸವ, ಸ್ಮರಣ ಸಂಚಿಕೆ ಬಿಡುಗಡೆ ಹಾಗೂ ರಾಜ್ಯಮಟ್ಟದ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದಿನ ಮೊಬೈಲ್, ದೂರದರ್ಶನ (ಟಿವ್ಹಿ) ಯುಗದಲ್ಲಿ ನಾಟಕ ವೀಕ್ಷಣೆ ಕಡಿಮೆಯಾಗುತ್ತಿದೆ. ಸಮಾಜಕ್ಕೆ ಉತ್ತಮ ಸಂದೇಶ ನೀಡುವ ನಾಟಕಗಳು ಅಗತ್ಯವಿದೆ. ಪ್ರತಿ ಗ್ರಾಮದ ಜಾತ್ರೆಗಳಲ್ಲಿ ನಾಟಕ ಪ್ರದರ್ಶನವಾಗುವದನ್ನು ಕಾಣುತ್ತೇವೆ. ನಮ್ಮ ದೇಶದ ಸಂಸ್ಕೃತಿ ಉಳಿಯಬೇಕಾದರೆ ಕಲಾವಿದರು, ಕವಿಗಳು, ಬರಹಗಾರರು ಉಳಿಯಬೇಕು. ಇವರಿಗೆ ಸೂಕ್ತ ಪ್ರೋತ್ಸಾಹ ನೀಡುವ ಅಗತ್ಯವಿದೆ. ಇವರದು ದೊಡ್ಡ ಶಕ್ತಿ. ಇವರ ಶಕ್ತಿ ಸಮಾಜವನ್ನು ಪರಿವರ್ತನೆ ಮಾಡಬಲ್ಲದು. ಮಹಾತ್ಮಗಾಂಧೀಜಿ ಬಾಲ್ಯದಲ್ಲಿ ಸತ್ಯಹರಿಶ್ಚಂದ್ರ ನಾಟಕ ವೀಕ್ಷಣೆಯಿಂದ ಬದಲಾವಣೆಯಾಗಿರುವದನ್ನು ನಾವು ತಿಳಿದುಕೊಂಡಿದ್ದೇವೆ. ಇಂತಹ ಉದಾಹರಣೆಗಳು ಸಾಕಷ್ಟು ನಮ್ಮ ಕಣ್ಣುಮುಂದೆ ಇವೆ ಎಂದರು.



ಬರಹಗಾರರು, ಕವಿಗಳು, ಕಲಾವಿದರು ಎಂದಿಗೂ ಧೈರ್ಯಗೆಡಬಾರದು. ಅವರ ಹಿಂದೆ ಸರ್ಕಾರ ಸದಾ ಇರುತ್ತದೆ. ನಾನು ಆಡಳಿತ ಪಕ್ಷದ ವಿರೋಧ ಪಕ್ಷದಲ್ಲಿದ್ದ ಕಾರಣದಿಂದ ಈ ಸಂಘವು ಕವಿ ಭವನ, ಸಂಘಕ್ಕೆ ಎರಡು ಎಕರೆ ಜಾಗೆ ಬೇಡಿಕೆ ನಮ್ಮ ಮುಂದೆ ಇಟ್ಟಿರುವ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಗಮನಕ್ಕೆ ತಂದು ಸಿಎಂ ಡಿ.ಕೆ.ಶಿವಕುಮಾರ ಅವರ ಗಮನಕ್ಕೆ ಪ್ರಾಮಾಣಿಕವಾಗಿ ತರಲಾಗುವದು ಎಂದರು.

ಸಂಘದ ರಾಜ್ಯಾಧ್ಯಕ್ಷ ಶಂಕರಜಿ ಮಾತನಾಡಿ, ರಾಜ್ಯದಲ್ಲಿ ಎಲ್ಲದಕ್ಕೂ ಸಂಘಗಳಿವೆ. ಬರಹಗಾರರ, ಕವಿಗಳ ಸಂಘ ಇಲ್ಲದೇ ಇರುವದರಿಂದಾಗಿ ನಾವು ಈ ಸಂಘವನ್ನು ಸ್ಥಾಪಿಸಿದ್ದೇವೆ. ಈ ಸಂಘದಿಂದ ಕವಿ-ಕಲಾವಿದರ ಬದುಕಿಗೆ ನೆರವಾಗುವ ಉದ್ದೇಶವಿದೆ. ರಾಜ್ಯದಲ್ಲಿ ವಿವಿಧ ಅಕಾಡೆಮಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿದ್ದರೂ ಕವಿಗಳಿಗೆ, ಬರಹಗಾರರಿಗೆ, ಕಲಾವಿದರಿಗೆ ಸರಿಯಾದ ಸೌಲಭ್ಯ ಸಿಗುತ್ತಿಲ್ಲ. ಎಲ್ಲರನ್ನೂ ಒಂದುಗೂಡಿಸಿ ಇವರ ಜೀವನದ ಭದ್ರತೆಗೆ ಸಂಘವು ಶ್ರಮಿಸಲಿದೆ ಎಂದರು.

ಕವಿ,ಬರಹಗಾರರು ಸಮಾಜದ ಆಸ್ತಿ. ಇವರು ವಿಕೃತ ಸಾಹಿತ್ಯ ರಚನೆ ಮಾಡದೇ ಸಮಾಜಕ್ಕೆ ಉತ್ತಮ ಸಂದೇಶದ, ಶ್ರೀಮಂತ ಹೃದಯದ ಸಾಹಿತ್ಯವನ್ನು ರಚಿಸಬೇಕು. ಸಂಸ್ಕೃತಿಯನ್ನು ಉಳಿಸುವ ಜವಾಬ್ದಾರಿ ಇವರ ಮೇಲಿದೆ. ಪ್ರಶಸ್ತಿ ದೊಡ್ಡದಲ್ಲ. ಸಾಧನೆ ದೊಡ್ಡದು. ಈ ನಿಟ್ಟಿನಲ್ಲಿ ಅನೇಕ ಸಾಧಕರಿಗೆ ಸಂಘವು ಪ್ರಶಸ್ತಿ ಪ್ರಧಾನ ಮಾಡಲಾಗುತ್ತಿದೆ. ಸರ್ಕಾರವು ನಮಗೂ ಐಡಿ ಕಾರ್ಡ್ ವಿತರಣೆ ಮುಂದಾಗಬೇಕು. ಜು.4 ಕ್ಕೆ ಸಂಘಕ್ಕೆ ಒಂದು ವರ್ಷ ಪೂರ್ಣವಾಗಲಿದೆ. ಅಂದು ನಡೆಯಲಿರುವ ವಾರ್ಷಿಕೋತ್ಸವಕ್ಕೆ ಸಂಘದ ಎಲ್ಲ ಸದಸ್ಯರು, ಕಲಾವಿದರು ಆಗಮಿಸಿ ಸಮಸ್ಯೆಗಳ ಕುರಿತು ಚರ್ಚಿಸಿ ಸರ್ಕಾರದ ಗಮನಕ್ಕೆ ತರೋಣ. ಜು.5 ರಂದು ಗದಗದಲ್ಲಿ ಪುಟ್ಟರಾಜ ಗವಾಯಿಗಳ ಅಜ್ಜನ ಜಾತ್ರೆ ಇದೆ. ಈ ಜಾತ್ರೆಯಲ್ಲಿ ಎಲ್ಲರೂ ಭಾಗವಹಿಸುವಂತಾಗಬೇಕೆಂದರು.

ಸಂಘದ ಗೌರವಾಧ್ಯಕ್ಷ ಡಿ.ಆರ್.ಪೂಜಾರಿ ಮಾತನಾಡಿ, ಕಲೆ ಎಲ್ಲರನ್ನು ಆಕರ್ಷಿಸುತ್ತದೆ. ಪುಟ್ಟರಾಜ ಗವಾಯಿಗಳು ಕಲೆ ಬೀಜ ಬಿತ್ತಿದ್ದಾರೆ. ಕಲಾವಿದರು ತಮ್ಮ ಕೀರ್ತಿ ಉಳಿಸಿಕೊಳ್ಳುವಂತಿರಬೇಕು. ಕವಿ-ಕಲಾವಿದರ ಸಮಸ್ಯೆಗಳ ಪರಿಹಾರಕ್ಕೆ ಸಂಘವು ಸದಾ ಬದ್ಧ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಹಾರಿವಾಳ ಮಾತನಾಡಿ, ಡಾ.ರಾಜಕುಮಾರ ಅವರು ರಂಗಭೂಮಿಯಿಂದ ಬಂದು ವರನಟರಾಗಿ ಅಜರಾಮರವಾಗಿದ್ದಾರೆ. ಕಲೆ ಉಳಿಸಲು ಇಂತಹ ಸಂಘಟನೆ ಅಗತ್ಯವಿದೆ. ಹೆಸರಾಂತ ನಾಟಕಗಳು ಸದಾ ಜನರ ಮನಸ್ಸಿನಲ್ಲಿರುತ್ತವೆ. ಕಲೆಯನ್ನು ಉಳಿಸಿ ಬೆಳೆಸಬೇಕೆಂದರು.

ಸಂಘದ ಕಾರ್ಯಾಧ್ಯಕ್ಷ ಗುರಪ್ಪ ಪಾಟೀಲ, ಡಾ.ರಾಘವೇಂದ್ರ ಉಮರಗಿ, ಪುಂಡಲಿಂಗ ಹೂಗಾರ ಮಾತನಾಡಿದರು.

ಕಾರ್ಯಕ್ರಮದಲ್ಲಿ ರಾಜುಗೌಡ ನಾಡಗೌಡ, ದತ್ತಾತ್ರೇಯ ಹೊಸಮಠ, ಬಸನಗೌಡ ಪಾಟೀಲ, ಅಪ್ಪುಗೌಡ ಬಿರಾದಾರ, ಅಶೋಕ ಚಲವಾದಿ, ಪ್ರೇಮಕುಮಾರ ರಾಯಪ್ಪಗೋಳ, ಜಗದೀಶ ಪಾಟೀಲ,ಶಿವಾನಂದ ಡೋಣೂರ ಇತರರು ಇದ್ದರು.

ಕಲಾವಿದರಾದ ಸಂಗಮೇಶ ಉಪ್ಪಲದಿನ್ನಿ, ನೀತಾ ಮೈಂದರ್ಗಿ, ಶೈಲಜಾ ದುಡನಕೇರಿ, ವಿದ್ಯಾಶ್ರೀ ನಡಗಡ್ಡಿ ಅವರು ತಮ್ಮ ಕಲಾ ಪ್ರದರ್ಶಿಸಿದರು. ಸಂಘದ ಜಿಲ್ಲಾಧ್ಯಕ್ಷ ವೈ.ಎಚ್.ಅಂಗಡಗೇರಿ ಪ್ರಾಸ್ತವಿಕವಾಗಿ ಮಾತನಾಡಿ, ಸ್ವಾಗತಿಸಿದರು. ಸಿದ್ದಪ್ಪ ಅಲಗೊಂಡ ನಿರೂಪಿಸಿದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಶಂಕರಗೌಡ ಬಿರಾದಾರ, ಕಲ್ಲು ಸೊನ್ನದ, ಅಶೋಕ ಹಾರಿವಾಳ, ಪ್ರಕಾಶ ಬೆಣ್ಣೂರ, ಬಸವರಾಜ ನಂದಿಹಾಳ, ಸಂಗಮೇಶ ಕುಂಬಾರ, ನೀತಾ ಮೈಂದರ್ಗಿ, ದೇವೇಂದ್ರ ಗೋನಾಳ, ಮುತ್ತರಾಜ ಬಾಗೇವಾಡಿ, ಶಿವಾನಂದ ಬಡಿಗೇರ ಸೇರಿದಂತೆ ಅನೇಕರಿಗೆ ವಿವಿಧ ರಾಜ್ಯಮಟ್ಟದ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಕವಿಗಳ ನೆನಪು ಮನದಂಗಳದಲ್ಲಿ ಸ್ಮರಣ ಸಂಚಿಕೆ ಬಿಡುಗಡೆ ಗೊಳಿಸಲಾಯಿತು.

ಸಮಾರಂಭಕ್ಕೂ ಮುನ್ನ ಡಾ.ಬಿ.ಆರ್.ಅಂಬೇಡ್ಕರ ವೃತ್ತದಿಂದ ಗಾನಯೋಗಿ ಡಾ.ಪಂಚಾಕ್ಷರಿ ಪುಟ್ಟರಾಜ ಗವಾಯಿಗಳ ಭಾವಚಿತ್ರದ ಮೆರವಣಿಗೆ ವಿವಿಧ ಕಲಾ ತಂಡದೊಂದಿಗೆ ಆರಂಭವಾಗಿ ಪಟ್ಟಣದ ಪ್ರಮುಖ ಬೀದಿಗಳ ಮೂಲಕ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಬಂದು ತಲುಪಿತು.

---


### ಇಟಗಿಯಲ್ಲಿ ಪಿಕೆಪಿಎಸ್ ಸುವರ್ಣ ಮಹೋತ್ಸವ । ನೂತನ ಕಟ್ಟಡ ಲೋಕಾರ್ಪಣೆ

## ಶೀತಲೀಕರಣ ಕೇಂದ್ರ, ಉಗ್ರಾಣ ನಿರ್ಮಾಣಕ್ಕೆ ಶಾಸಕರ ಭರವಸೆ

■ ಉದಯರಶ್ಮಿ ದಿನಪತ್ರಿಕೆ

ನಿಡಗುಂದಿ: ಸಮೀಪದ ಇಟಗಿ ಗ್ರಾಮದ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ (ಪಿಕೆಪಿ-ಎಸ್) ಸುವರ್ಣ ಮಹೋತ್ಸವ ಹಾಗೂ ನೂತನ ಕಟ್ಟಡದ ಉದ್ಘಾಟನೆ ಭಾನುವಾರ ವಿಜೃಂಭಣೆಯಿಂದ ನೆರವೇರಿತು.

ಕಾರ್ಯಕ್ರಮ ಉದ್ಘಾಟಿಸಿದ ವಿಜಯಪುರ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಹಾಗೂ ಶಾಸಕ ಶಿವಾನಂದ ಪಾಟೀಲ ಮಾತನಾಡಿ, "ಹಾಲು ಉತ್ಪಾದನೆಯಲ್ಲಿ ಕರ್ನಾಟಕ ದೇಶದಲ್ಲೇ ಮುಂಚೂಣಿಯಲ್ಲಿರಲು ಮಹಿಳೆಯರ ಶ್ರಮವೇ ಕಾರಣ. ದೇಶದಲ್ಲಿ ದಿನಕ್ಕೆ 1.05 ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಕ್ಷೀರಭಾಗ್ಯ ಯೋಜನೆಯಡಿ ಶಾಲಾ ಮಕ್ಕಳಿಗೆ ವಾರಕ್ಕೆ ಐದು ದಿನ ಹಾಲು ವಿತರಿಸಲಾಗುತ್ತಿದೆ" ಎಂದರು.



"ಒಂದು ಕಾಲದಲ್ಲಿ ಆಹಾರ ಧಾನ್ಯಗಳಿಗೆ ವಿದೇಶ ಅವಲಂಬಿಸಿದ್ದ ಭಾರತ ಇಂದು ರೈತರ ಪರಿಶ್ರಮದಿಂದ ಸ್ವಾವಲಂಬಿಯಾಗಿದೆ. ಇಟಗಿ ಪಿಕೆಪಿಎಸ್ ವತಿಯಿಂದ ಶೀತಲೀಕರಣ ಕೇಂದ್ರ ಹಾಗೂ ಉಗ್ರಾಣ ನಿರ್ಮಾಣಕ್ಕೆ ಎಲ್ಲ ಸಹಕಾರ ನೀಡಲಾಗುವುದು" ಎಂದು ಭರವಸೆ ನೀಡಿದರು. ಸಂಘದ ಕಟ್ಟಡಕ್ಕೆ 15 ಗುಂಟೆ ನೀರಾವರಿ ಜಮೀನನ್ನು ಉಚಿತವಾಗಿ ದಾನ ಮಾಡಿದ ಹಾಲಪ್ಪ ಕಂಬಾರ ಅವರನ್ನು ಅವರು ಅಭಿನಂದಿಸಿದರು.

"ಇಟಗಿ ಸಂಪೂರ್ಣ ನೀರಾವರಿ ಗ್ರಾಮ. ರೈತರು ಕೇವಲ ಕಬ್ಬು, ಈರುಳ್ಳಿಗೆ ಸೀಮಿತವಾಗದೆ ಬೆಳ್ಳುಳ್ಳಿ, ದಾಳಿಂಬೆ ಸೇರಿ ವೈವಿಧ್ಯಮಯ ಬೆಳೆಗಳತ್ತ ಗಮನಹರಿಸಬೇಕು" ಎಂದು ಶಾಸಕರು ಸಲಹೆ ನೀಡಿದರು.

ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ ನುಗ್ಗಲಿ ಮಾತನಾಡಿ, "ನಾಟಕ, ಕಲೆ, ಕ್ರೀಡೆಗೆ ಹೆಸರಾದ ಇಟಗಿಗೆ ಕೆಪಿಎಸ್ ಶಾಲೆ ಮಂಜೂರು ಮಾಡಬೇಕು" ಎಂದು ಸರ್ಕಾರವನ್ನು ಆಗ್ರಹಿಸಿದರು.

ಇಟಗಿಯ ಗುರುಶಾಂತವೀರ ಸ್ವಾಮೀಜಿ, ಚಿಮ್ಮಲಗಿಯ ಸಿದ್ದರೇಣುಕ ಸ್ವಾಮೀಜಿ ಹಾಗೂ ಸರೂರು ಮೃತ್ಯುಂಜಯ ಗುರುಗಳು ಸಾನ್ನಿಧ್ಯ ವಹಿಸಿದ್ದರು. ಡಾ. ವಿಶ್ವನಾಥ ಮಠ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ದೇವರ ಹಿಪ್ಪರಗಿ ಶಾಸಕ ರಾಜುಗೌಡ ಬಿ. ಪಾಟೀಲ, ಮಾಜಿ ಶಾಸಕ ಸೋಮನಗೌಡ ಪಾಟೀಲ, ಐ.ಸಿ. ಪಟ್ಟಣಶೆಟ್ಟಿ ಜ್ಯೋತಿ ಬೆಳಗಿಸಿ ಚಾಲನೆ ನೀಡಿದರು. ಪಿಕೆಪಿಎಸ್ ಅಧ್ಯಕ್ಷ ಮುದ್ದಪ್ಪ ಗಾಳಿ ಅಧ್ಯಕ್ಷತೆ ವಹಿಸಿದ್ದರು. ಪ್ರಗತಿಪರ ರೈತ ಮಹಿಳೆ ಕವಿತಾ ಮಿಶ್ರಾ ಹಾಗೂ ಜಾನಪದ ಸಾಹಿತಿ ಸಿದ್ದಪ್ಪ ಬಿದರಿ ವಿಶೇಷ ಉಪನ್ಯಾಸ ನೀಡಿದರು.

ವೇದಿಕೆಯಲ್ಲಿ ಮಾಜಿ ಜಿ.ಪಂ ಸದಸ್ಯೆ ಗೌರಮ್ಮ ಮುತ್ತತ್ತಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಾ. ಪ್ರಭುಗೌಡ ಲಿಂಗದಳ್ಳಿ, ಗ್ರಾ.ಪಂ ಅಧ್ಯಕ್ಷ ಲಕ್ಷ್ಮಣ ಮಾಗಿ, ಉಪನಿಬಂಧಕಿ ಎಸ್.ಕೆ. ಭಾಗ್ಯಶ್ರೀ, ಮಹೇಶ ಗಾಳಪ್ಪಗೋಳ, ಆನಂದಗೌಡ ಬಿರಾದಾರ, ವಿ.ಕೆ. ಮಸೂತಿ, ಮುತ್ತಣ್ಣ ಹುಗ್ಗಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.


---

## ಆಲಮೇಲದಲ್ಲಿ ನಡೆದ ವೈಭವದ ಕಾರ ಹುಣ್ಣಿಮೆ

■ ಉದಯರಶ್ಮಿ ದಿನಪತ್ರಿಕೆ

ಆಲಮೇಲ: ಜಿಲ್ಲೆಯಲ್ಲಿಯೇ ಆಲಮೇಲ ಪಟ್ಟಣ ದಲ್ಲಿ ಸಾಂಸ್ಕೃತಿಕ ಜಾನಪದ ಕಲೆ ಜಾತ್ರೆ ಹಬ್ಬ ಹರಿದಿನಗಳನ್ನು ವಿಶಿಷ್ಟವಾಗಿ ಆಚರಿಸಲಾಗುತ್ತಿದ್ದು, ಕಾರಹುಣ್ಣಿಮೆಯನ್ನು ಸೋಮವಾರ ಸಡಗರ ಸಂಭ್ರಮದಿಂದ ಆಚರಿಸ ಲಾಯಿತು. ಕಾರಹುಣ್ಣಿಮೆಯಂದು ಪಟ್ಟಣದ ಪ್ರಮುಖ ಮನೆತನಗಳಾದ ದೇಶಮುಖ ಮತ್ತು ದೇಶಪಾಂಡೆ ಮನೆಗಳಿಂದ ಎತ್ತುಗಳ ಬಂಡಿ ಓಡಸಿ ಕರಿ ಹರಿಯಲಾಯಿತು. ಈ ಪದ್ಧತಿ ಹಿಂದಿನಿಂದಲು ನಡೆಸಿಕೊಂಡು ಬಂದಿರುವುದು ವಿಶೇಷವಾಗಿದೆ.

ಮೀಸಲು ಕರಿ: ಕಾರಹುಣ್ಣಿಮೆಯಂದು ಬೆಳ್ಳಗೆ ಹಳ್ಳಕ್ಕೆ ತೆರಳಿ ಎತ್ತು ಮತ್ತು ಬಂಡಿಯನ್ನು ತೊಳೆದು ಕೊಂಡು ಬೇವಿನ ತಪ್ಪಲಗಳಿಂದ ಶೃಂಗರಿಸಲಾಯಿತು. ನಂತರ ದೇಶಮುಖರ ಸಮ್ಮುಖದಲ್ಲಿ ಸಂಜೆ ಎತ್ತಿನ ಬಂಡಿಯ ಓಟ ಕರಿಹರೆಯುವ ಸಂಪ್ರದಾಯ ನಡೆಯಿತು. ಇಲ್ಲಿ ದೇಶಪಾಂಡೆ ಮತ್ತು ದೇಶಮುಖರ ಮನೆತನದ ಲಕ್ಷ್ಮೀ ಬಂಡೆಗಳ ಕರಿ ಹರಿಯುತ್ತವೆ. ಇದಕ್ಕೂ ಪೂರ್ವದಲ್ಲಿ ಕರಿ ಹರಿಯುವ ಓಟದಲ್ಲಿ ಪಾಲ್ಗೊಳ್ಳುವ ಚಿಟ್ಟ ಬಂಡಿ ಮತ್ತು ಎತ್ತುಗಳನ್ನು ಬಣ್ಣ ತೋರಣಗಳಿಂದ ಅಲಂಕಾರಿಸಲಾಗಿತ್ತು. ಎರಡು ಬಂಡಿಗಳನ್ನು ಸಕಲ ವಾದ್ಯ ವೈಭವಗಳೊಂದಿಗೆ ಗ್ರಾಮದ ದೇವರಾದ ಶ್ರೀಗಾಲಿಸಾಬ ದರ್ಗಾದ ಎದುರು ತರಲಾಯಿತು. ಬಳಿಕ ಎರಡೂ ಬಂಡಿಗಳು ದರ್ಗಾದ ಮುಂದೆ ಐದು ಸುತ್ತು ಓಡಿಸಿದ ನಂತರ ಮನೆಗೆ ತೆರಳುವಾಗ ದೇಶಮುಖರ ಲಕ್ಷ್ಮೀ ಬಂಡಿ ದಕ್ಷಿಣ ದಿಕ್ಕಿನಲ್ಲಿರುವ ದೇವರ ಅಗಸಿಗೆ ಬೇವಿನ ತೋರಣ ಹಿಡಿದು ಕರಿ ಹರಿಯಲಾಯಲಾಯಿತು.



ಸಾಂಪ್ರದಾಯದಂತೆ ದೇಶಮುಖರ ಬಂಡೆಗೆ ಶ್ರೀಮಂತ ಲಾವಟೆ ಅವರು ಎತ್ತುಗಳನ್ನು ಕಟ್ಟಿದರು. ಬಂಡಿ ಮೇಲೆ ಬಸವರಾಜ ಹೊಸಮನಿ, ದೇಶಪಾಂಡೆ ಬಂಡೆಗೆ ಮಹಿಬೂಬ ಸೌದಾಗರ ಅವರು ಎತ್ತುಗಳು ಕಟ್ಟಿದರು. ಬಂಡಿ ಮೇಲೆ ಈರಣ್ಣ ಗುರಕಾರ ನಿಂತಿದ್ದರು. ದೇಶಮುಖರ ಬಂಡೆಗೆ ಗ್ರಾಮದ ವಾಲಿಕಾರರು ಕೈಯಲ್ಲಿ ತಲವಾರು ಹಾಗೂ ಬಡಿಗಿಗಳನ್ನು ಹಿಡಿದು ಬಂಡೆಗೆ ಕಾವಲು ರಕ್ಷಣೆ ನೀಡಿದರು. ಸಂಜೆ ಎರಡು ಬಂಡೆಗಳು ಬರುವಕಿಂತ ಪೂರ್ವದಲ್ಲಿ 20 ಕ್ಕೂ ಹೆಚ್ಚು ಚಿಕ್ಕ ಬಂಡೆಗಳನ್ನು ಓಡಿಸಲಾಯಿತು.

ಈ ಬಂಡಿ ಸ್ಪರ್ಧೆ ಮತ್ತು ಕರಿಹರಿಯುವ ಸಂಭ್ರಮವನ್ನು ಪಟ್ಟಣದ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾವಿರಾರು ಜನರು ಸೇರಿ ವೀಕ್ಷಿಸಿದರು.

---

# ಬಿಡುವೆನೆಂದರೂ ಬಿಡದಿ ಮಾಯೆ..

■ ಉದಯರಶ್ಮಿ ದಿನಪತ್ರಿಕೆ




ಬಿಡದಿ. ಬೆಂಗಳೂರು-ಮೈಸೂರು ಹೆದ್ದಾರಿಯ ಆ ಬದಿ, ರಾಮನಗರದ ಹೊಸ್ತಿಲಲ್ಲಿ ಹಸಿರಾಗಿ ಉಸಿರಾಡುತ್ತಿರುವ ಭೂಮಿ.

ಈಗ ಅದೇ ಭೂಮಿಗೆ ಮತ್ತೆ ನೋಟಿಸ್ ಬಂದಿದೆ. ಗ್ರೇಟರ್ ಬೆಂಗಳೂರು ಇಂಟಿಗ್ರೇಟೆಡ್ ಟೌನ್‌ಶಿಪ್ - ಉಃಖಖ. ೦ಖ-ಪವರ್ಡ್ ಸ್ಮಾರ್ಟ್ ಸಿಟಿ ಎಂದು ಹೇಳುತ್ತಾರೆ.

ಬೈರಮಂಗಲ, ಕಂಚುಗಾರನಹಳ್ಳಿ ಸೇರಿ 26 ಹಳ್ಳಿಗಳ ರೈತರು 474 ದಿನಗಳಿಂದ ಧರಣಿಯಲ್ಲಿದ್ದಾರೆ. ಜೂನ್ 10, 2026 ರಂದು ಸರ್ಕಾರ 518.45 ಎಕರೆಗೆ ಅಂತಿಮ ಅಧಿಸೂಚನೆ ಹೊರಡಿಸಿದೆ.




ರೈತರು ಹೇಳುತ್ತಾರೆ: "ಸಾಯುತ್ತೇವೆ, ಭೂಮಿ ಕೊಡುವುದಿಲ್ಲ".

ಸರ್ಕಾರ ಹೇಳುತ್ತದೆ: "80% ರೈತರು ಒಪ್ಪಿದ್ದಾರೆ".ರೈತರು ಮತ್ತೆ ಹೇಳುತ್ತಾರೆ: "ಇಲ್ಲ, ನಮ್ಮನ್ನು ತಪ್ಪಾಗಿ ತೋರಿಸಲಾಗುತ್ತಿದೆ, ನಾವು ವಿರೋಧಿಸುತ್ತಿದ್ದೇವೆ".

ಯಾರ ಮಾತು ನಿಜ? ಹಳ್ಳಿಗೆ ಹೋಗಿ ನೋಡಿ. ಆ ತೋಟದಲ್ಲಿ ಇನ್ನೂ ರೇಷ್ಮೆ ಹುಳು ಸಾಕುತ್ತಿದ್ದಾರೆ. ವರ್ಷಕ್ಕೆ 35 ಕೋಟಿ ರೇಷ್ಮೆ ಆದಾಯ, 25 ಕೋಟಿ ಹಾಲಿನ ಆದಾಯ ಈ ಹಳ್ಳಿಗಳಿಂದಲೇ ಬರುತ್ತದೆ ಅಂತ ಬಿಜೆಪಿ ನಾಯಕರು ವಿಧಾನಸಭೆಯಲ್ಲಿ ಹೇಳಿದ್ದಾರೆ. ಇದು ಬಂಜರು ಭೂಮಿಯಲ್ಲ, ಬೆಂಗಳೂರಿಗೆ ತರಕಾರಿ, ಹಾಲು ಕೊಡುವ ಕೈಗಳು.

**ಇದು ಮೊದಲ ಸಲವಲ್ಲ**

ವರಾಹಿ ಯೋಜನೆಯ ಸಂತ್ರಸ್ತನಾದ ನನ್ನ ಉತ್ತರ ಸಿಗದ ಪ್ರಶ್ನೆ

### ಅಭಿಮತ

"ಇದುವರೆಗೂ ಇಂತಹ ಯೋಜನೆಗಳ ಫಲಶೃತಿ ಏನು? ಇದಕ್ಕೆ ಕೊನೆಯೆಂದು?"

ಶರಾವತಿ ಜಲವಿದ್ಯುತ್ ಯೋಜನೆಗೆ ಲಿಂಗನಮಕ್ಕಿ ಮುಳುಗಿತು. ವಾರಾಹಿಗೆ ಮಾಣಿ ಅಣೆಕಟ್ಟು ಕಾಳಿ ನದಿಗೆ ಕದ್ರಾ, ಕೊಡಸಳ್ಳಿ ಕಟ್ಟಿದಾಗ ಎಷ್ಟು ಊರುಗಳು ಹೋದವು. ಕೈಗಾ ಅಣು ವಿದ್ಯುತ್ ಸ್ಥಾವರಕ್ಕೆ ಭೂಮಿ ಕೊಟ್ಟವರಿಗೆ ಇಂದಿಗೂ ಪರಿಹಾರ ಸರಿಯಾಗಿ ಸಿಗಲಿಲ್ಲ.

**ಪ್ರತಿ ಬಾರಿ ಅದೇ ಕಥೆ**

**1. ಅಭಿವೃದ್ಧಿ ಎಂದು ಭೂಮಿ ತೆಗೆದುಕೊಳ್ಳುವುದು**

**2. ಎಕರೆಗೆ ಲಕ್ಷ ಕೊಟ್ಟು, ಕೋಟಿ ಮಾಡಿಕೊಂಡು ಮಾರುವುದು**

**3. ರೈತ ಬೆಂಗಳೂರಿನ ಸಿಗ್ನಲ್‌ನಲ್ಲಿ ಸೆಕ್ಯುರಿಟಿ ಗಾರ್ಡ್ ಆಗುವುದು**

ಬಿಡದಿ ಇಂಡಸ್ಟ್ರಿಯಲ್ ಟೌನ್‌ಶಿಪ್, ಹಾರೋಹಳ್ಳಿ ಇಂಡಸ್ಟ್ರಿಯಲ್ ಟೌನ್‌ಶಿಪ್ ಮಾಡಿದಾಗಲೂ ಇದೇ ಮಾತು ಕೇಳಿದ್ದೆವು - "ರೈತರು ಮಾಯವಾದರೇ?" ಎಂದು. ಹೌದು, ಮಾಯವಾಗಲಿಲ್ಲ. ಬದುಕು ಮಾಯವಾಯಿತು. ಭೂಮಿ ಹೋದವನು ಟೌನ್‌ಶಿಪ್‌ನಲ್ಲಿ ಫ್ಲಾಟ್ ಕೊಳ್ಳಲು ಆಗುತ್ತದೆಯೇ?

ಕುಮಾರಸ್ವಾಮಿಯವರು ಇದನ್ನು 'ಅಧಿಕೃತ ರಿಯಲ್ ಎಸ್ಟೇಟ್ ಬಿಸಿನೆಸ್' ಎಂದಿದ್ದಾರೆ. ಯಾರು ಮಾಡಿದರೂ, ಯಾವ ಪಕ್ಷ ಮಾಡಿದರೂ, ಬಿಲ್ ಕಟ್ಟುವುದು ರೈತನೇ.

ಬೆಂಗಳೂರು ಈಗಾಗಲೇ ಭೀಕರವಾಗಿದೆ. ನೀರಿಲ್ಲ, ಟ್ರಾಫಿಕ್‌ನಲ್ಲಿ ಉಸಿರುಗಟ್ಟುತ್ತಿದೆ. ಇನ್ನೊಂದು ಟೌನ್‌ಶಿಪ್ ಕಟ್ಟಿ, ಇನ್ನೊಂದು ಹತ್ತು ಲಕ್ಷ ಜನರನ್ನು ತಂದು ಸುರಿದರೆ, ಬೆಂಗಳೂರು ಉಳಿಯುತ್ತದೆಯೇ, ರೈತ ಉಳಿಯುತ್ತಾನೆಯೇ?






**ಬಿಡದಿ ಮಾಯೆ ಬಿಡುವುದೇ?**

ಮಾಯೆ ಎಂದರೆ ಭ್ರಮೆ

ನಿಜವಾದ ಅಭಿವೃದ್ಧಿ ಎಂದರೆ ರೈತನನ್ನು ಒಕ್ಕಲೆಬ್ಬಿಸುವುದಲ್ಲ, ರೈತನ ಜೊತೆ ಬೆಳೆಯುವುದು.

ಭೂಮಿ ಕೊಟ್ಟ ರೈತನಿಗೆ ಆ ಟೌನ್‌ಶಿಪ್‌ನಲ್ಲಿ ಒಂದು ಅಂಗಡಿ, ಒಂದು ಕೆಲಸ, ಒಂದು ಘನತೆ ಸಿಗುವ ಯೋಜನೆ ಇದೆಯೇ? ಇಲ್ಲ. ಸಿಗುವುದು ಚೆಕ್ ಮಾತ್ರ. ಆ ಚೆಕ್ ಎರಡು ವರ್ಷದಲ್ಲಿ ಖಾಲಿ.

**ಒಕ್ಕಲೆಬ್ಬಿಸುವುದಕ್ಕೆ ಕೊನೆ ಯಾವಾಗ?**

ನಮ್ಮ ಹೊಟ್ಟೆಗೆ ಅನ್ನ ಬೆಳೆಯುವ ಕೊನೆಯ ಎಕರೆ ಹೋಗುವವರೆಗೂ?

ಬೆಂಗಳೂರಿಗೆ ಕುಡಿಯಲು ಕೊನೆಯ ಹನಿ ನೀರು ಇರುವ ಕೆರೆ ಮುಚ್ಚುವವರೆಗೂ?

ಬಿಡದಿ ಬಿಡಬೇಕು. ರೈತನನ್ನು ಬಿಡಬೇಕು. ಈ ಮಾಯೆಯನ್ನು ನಾವು ಬಿಡಬೇಕು.

ಇಲ್ಲದಿದ್ದರೆ, ಬಿಡುವೆನೆಂದರೂ ಬಿಡದ ಈ ಮಾಯೆ, ಒಂದು ದಿನ ನಮ್ಮನ್ನೆಲ್ಲಾ ನುಂಗಿ ಬಿಡುತ್ತದೆ.

ಲೇಖನ
– ಮ.ನಾ.ಉಡುಪ
ಮಂಡ್ಯ



## ಅನಧಿಕೃತ ಕಟ್ಟಡ ತೆರವುಗೊಳಿಸಲು ಪುರಸಭೆಗೆ ಒತ್ತಾಯ



■ ಉದಯರಶ್ಮಿ ದಿನಪತ್ರಿಕೆ

ಮುದ್ದೇಬಿಹಾಳ: ಪಟ್ಟಣದ ಇಂದಿರಾನಗರದ ಸರ್ವೇ ನಂ. 59ರಲ್ಲಿ ನಿರ್ಮಿಸಲಾಗಿರುವ ಚರಂಡಿಯನ್ನು ತಕ್ಷಣ ಸ್ವಚ್ಛಗೊಳಿಸಿ, ಅನಧಿಕೃತವಾಗಿ ನಿರ್ಮಿಸಲಾಗಿರುವ ಕಟ್ಟಡಗಳನ್ನು ತೆರವುಗೊಳಿಸುವಂತೆ ಆಗ್ರಹಿಸಿ ಸ್ಥಳೀಯ ನಿವಾಸಿಗಳು ಮುಖಂಡ ಮಹಿಬೂಬ ಅವಟಿ ನೇತೃತ್ವದಲ್ಲಿ ಪುರಸಭೆ ಮುಖ್ಯಾಧಿಕಾರಿ ಮಲ್ಲನಗೌಡ ಬಿರಾದಾರ ಅವರಿಗೆ ಮನವಿ ಸಲ್ಲಿಸಿದರು.

ಈ ಹಿಂದೆ ಸಾರ್ವಜನಿಕರು ನಡೆಸಿದ್ದ ಧರಣಿಯ ನಂತರ ಪುರಸಭೆ ಅಧಿಕಾರಿಗಳು ಸ್ಪಂದಿಸಿ ಕೆಲವು ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಿದ್ದಕ್ಕಾಗಿ ಅಭಿನಂದನೆ ಸಲ್ಲಿಸಿದ ನಿವಾಸಿಗಳು ತೆರವುಗೊಳಿಸಿದ ಕಟ್ಟಡಗಳ ಅವಶೇಷಗಳನ್ನು ಇನ್ನೂ ಸ್ಥಳದಿಂದ ತೆರವುಗೊಳಿಸದ ಕಾರಣ ಸಾರ್ವಜನಿಕರ ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿದೆ ಎಂದು ದೂರಿದರು.

ಇದಲ್ಲದೆ, ಚರಂಡಿಯಲ್ಲಿ ಕೊಳಚೆ ನೀರು ನಿಂತು ದುರ್ವಾಸನೆ ಹರಡುತ್ತಿದ್ದು, ಸೊಳ್ಳೆಗಳ ಕಾಟ ಹೆಚ್ಚಾಗಿ ಸುತ್ತಮುತ್ತಲಿನ ನಿವಾಸಿಗಳ ಆರೋಗ್ಯಕ್ಕೂ ಅಪಾಯ ಉಂಟಾಗುತ್ತಿದೆ ಕೂಡಲೇ ಚರಂಡಿಯನ್ನು ಸ್ವಚ್ಛಗೊಳಿಸಿ, ಕೊಳಚೆ ನೀರು ಸರಾಗವಾಗಿ ಹರಿಯುವಂತೆ ಅಗತ್ಯ ಕಾಮಗಾರಿ ಕೈಗೊಳ್ಳುವ ಮೂಲಕ ಸ್ವಚ್ಛತೆಗೆ ಆದ್ಯತೆ ಕೊಡಬೇಕು ಮತ್ತು ಸರ್ವೇ ನಂ. 59ರಲ್ಲಿ ನಿರ್ಮಾಣವಾಗಿರುವ ಎಲ್ಲಾ ಅನಧಿಕೃತ ಕಟ್ಟಡಗಳ ಬಗ್ಗೆ ಸಮಗ್ರ ಪರಿಶೀಲನೆ ನಡೆಸಿ, ನಿಯಮಾನುಸಾರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಶರಣು ಹೊಳಿ, ರೇಣುಕಾ ವಾಲಿಕಾರ, ಇಮಾಂಬಿ ವಾಲಿಕಾರ, ಬಂದೇನವಾಜ್ ಮುಲ್ಲಾ, ಅಬ್ರಾರ್ ಮುಲ್ಲಾ, ಅಬ್ದುಲ್ ಜಬ್ಬಾರ್ ಗೋಲಂದಾಜ್, ಬಾಬಾ ಮುಲ್ಲಾ ಸೇರಿದಂತೆ ಮತ್ತೀತರರು ಇದ್ದರು.

# ಮಕ್ಕಳ ಆರೋಗ್ಯಕ್ಕೆ ಪೋಲಿಯೋ ಹನಿ ಅಗತ್ಯ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: 5 ವರ್ಷದೊಳಗಿನ ಮಕ್ಕಳ ಆರೋಗ್ಯಯುತ ಬೆಳವಣಿಗೆಗೆ ಪಲ್ಸ್ ಪೋಲಿಯೋ ಲಸಿಕೆ ಹಾಕಿಸುವುದು ಅಗತ್ಯವಾಗಿದೆ. ಎಲ್ಲ ಪಾಲಕರು ನಿರ್ಲಕ್ಷ್ಯ ತೋರದೆ ತಮ್ಮ ಮಕ್ಕಳನ್ನು ಲಸಿಕಾ ಕೇಂದ್ರಗಳಿಗೆ ಕರೆ ತಂದು ಲಸಿಕೆ ಹಾಕಿಸುವ ಮೂಲಕ ಅವರಿಗೆ ಆರೋಗ್ಯ ಸಂಪತ್ತು ಕಲ್ಪಿಸಬೇಕು ಎಂದು ನಾಗಠಾಣ ಶಾಸಕರಾದ ವಿಠ್ಠಲ ಕಟಕದೊಂಡ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಾನಗರ ಪಾಲಿಕೆ ಹಾಗೂ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ದರ್ಗಾ ಸಹಯೋಗದಲ್ಲಿ ಇತ್ತಿಚಿಗೆ ಹಮ್ಮಿಕೊಳ್ಳಲಾಗಿದ್ದ ಪಲ್ಸ್ ಪೋಲಿಯೋ ಹನಿ ಹಾಕುವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತಿಚಿಗೆ ಕ್ಯಾನ್ಸರ್ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು ಎಲ್ಲ ತಾಯಂದಿರು ಪ್ರತಿ ವರ್ಷ ಆರೋಗ್ಯ ತಪಾಸಣೆಗೆ ಒಗಳಗಾಗಬೇಕು. ಜಿಲ್ಲೆಯ 0-5 ವರ್ಷದೊಳಗಿನ ಮಕ್ಕಳ ಗುರಿ-293519 ಇದ್ದು, ಅದಕ್ಕಾಗಿ ಪೋಲಿಯೋ ಬೂತ್‌ಸಂಖ್ಯೆ-1326 ರಚಿಸಿದ್ದು, ಇದರಲ್ಲಿ 31 ಸಂಚಾರಿ ತಂಡಗಳು ಮತ್ತು ಟ್ರಾಂಜಟ್-41 ತಂಡಗಳನ್ನು ಒಳಗೊಂಡಿದೆ. ಪೋಲಿಯೋ ನಿರ್ಮೂಲನೆಯಲ್ಲಿ ದೇಶ ಗಣನೀಯ ಸಾಧನೆ ಮಾಡಿದೆ. ಈ ನಿಟ್ಟಿನಲ್ಲಿ ಪೋಲಿಯೋ ನಿರ್ಮೂಲನೆಗೆ ಜಿಲ್ಲಾದ್ಯಾಂತ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಯಾವುದೇ ಮಗು ಪೊಲಿಯೋ ಲಸಿಕೆಯಿಂದ ವಂಚಿತವಾಗದೇ ನೋಡಿಕೊಳ್ಳಬೇಕು. ಅದರೊಂದಿಗೆ ನಿಗದಿತ ಗುರಿ ಸಾಧಿಸುವಂತೆ ಮತ್ತು ನಮ್ಮ ಜಿಲ್ಲೆಯು ದೇಶದಲ್ಲಿ ಲಸಿಕೆ ನೀಡುವದರಲ್ಲಿ ಪ್ರಥಮ ಆಗಬೇಕು ಎಂದರು.

ಮಹಾನಗರ ಪಾಲಿಕೆ ಮೇಯರ್ ಮಡಿವಾಳಪ್ಪ ಕರಡಿ ಮಾತನಾಡಿ, ನಗರ ಪ್ರದೇಶ ಮತ್ತು ಗ್ರಾಮೀಣ ಭಾಗದಲ್ಲಿ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಲು ಮಹಾನಗರ ಪಾಲಿಕೆ ಹಾಗೂ ಗ್ರಾಮ ಪಂಚಾಯಿತಿಗಳ ಪಾತ್ರ ಬಹಳ ಮುಖ್ಯ. ಎಲ್ಲರೂ ಬದ್ದತೆಯಿಂದ ಕಾರ್ಯನಿರ್ವಹಿಸಿ ಪೋಲಿಯೋ ನಿರ್ಮೂಲನೆಗೆ ಕೈಜೋಡಿಸಬೇಕೆಂದರು.

ಕಾರ್ಯಕ್ರಮದಲ್ಲಿ ಜಿಲ್ಲೆಯ ಪಲ್ಸ್ ಪೋಲಿಯೋ ನೋಡಲ್ ಅಧಿಕಾರಿಗಳಾದ ಡಾ. ಶ್ರೀನಿವಾಸ ಎಸ್ ಆರ್, ಡಬ್ಲ್ಯೂಎಚ್‌ಓ ಸರ್ವೇಕ್ಷಣ ಅಧಿಕಾರಿ ಡಾ.ಮುಕುಂದ ಗಲಗಲಿ, ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳಾದ ಡಾ. ಪರಶುರಾಮ ಹಿಟ್ನಳ್ಳಿ, ಡಾ. ಅಪ್ಪಾಸಾಹೇಬ ಇನಾಮದಾರ, ತಾಲೂಕಾ ಆರೋಗ್ಯಾಧಿಕಾರಿಗಳಾದ ಡಾ. ಕೆ.ಡಿ.ಗುಂಡಬಾವಡಿ, ಡಾ. ಶೈಲೇಜಾ ಶಿವಶರಣ, ದರ್ಗಾ ನಗರ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಜಿ. ಎಂ. ಕೋಲೂರ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಸುರೇಶ ಹೊಸಮನಿ, ಡಿಜೆಡಿ ಬೆಳಗಾವಿ ವಿಭಾಗ, ಬೆಳಗಾವಿ, ಆರೋಗ್ಯ ಇಲಾಖೆಯ ಅಧಿಕಾರಿ, ಸಿಬ್ಬಂದಿ, ಕಾರ್ಯಕರ್ತೆಯರು ಭಾಗವಹಿಸಿದ್ದರು.

### ನಾಗಠಾಣ ಶಾಸಕ ವಿಠಲ ಕಟಕದೊಂಡ ಅಭಿಮತ

## ಜೂ.30 ರಿಂದ ಮತಗಟ್ಟೆ ಮಟ್ಟದ ಅಧಿಕಾರಿಗಳಿಂದ ಮನೆ-ಮನೆ ಭೇಟಿ

■ ಉದಯರಶ್ಮಿ ದಿನಪತ್ರಿಕೆ



**ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ-2026 | ವಿಜಯಪುರ ಜಿಲ್ಲಾಧಿಕಾರಿ & ಜಿಲ್ಲಾ ಚುನಾವಣಾಧಿಕಾರಿ ಡಾ.ಆನಂದ ಕೆ ಹೇಳಿಕೆ**

ವಿಜಯಪುರ: ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ-2026 ಪ್ರಕ್ರಿಯೆಯು ಪ್ರಸ್ತುತ ಜಾರಿಯಲ್ಲಿದ್ದು, ಈ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಇದೇ ಜೂನ್.30 ರಿಂದ ಮತಗಟ್ಟೆ ಮಟ್ಟದ ಅಧಿಕಾರಿಗಳು ಮನೆ-ಮನೆ ಭೇಟಿ ನೀಡಲಿದ್ದಾರೆ ಎಂದು ವಿಜಯಪುರ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ಡಾ.ಆನಂದ ಕೆ ಅವರು ತಿಳಿಸಿದ್ದಾರೆ.

ದಿನಾಂಕ: ಜೂ.30ರಿಂದ ಜುಲೈ.29ರವರೆಗೆ ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಅವರು ಜಿಲ್ಲೆಯ ಮನೆ-ಮನೆಗೆ ಭೇಟಿ ನೀಡಲಿದ್ದಾರೆ. ಭೇಟಿಯ ಸಂದರ್ಭದಲ್ಲಿ ಅಧಿಕಾರಿಗಳು ಎನ್ಯೂಮರೇಷನ್ ಫಾರ್ಮ್ ಗಳನ್ನು ದ್ವಿ-ಪ್ರತಿಯಲ್ಲಿ ಪ್ರತಿಯೊಬ್ಬ ಮತದಾರರಿಗೆ ನೀಡಲಿದ್ದಾರೆ. ಮತದಾರರು ಈ ಫಾರ್ಮ್‌ಗಳನ್ನು ಭರ್ತಿ ಮಾಡಿ, ಮರಳಿ ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ (ಬಿಎಲ್‌ಒ )ಅವರಿಗೆ ಹಿಂದಿರುಗಿಸುವಂತೆ ತಿಳಿಸಿದ್ದಾರೆ.

ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ-2026 ರ ಕುರಿತು ಹೆಚ್ಚಿನ ಮಾಹಿತಿ ಮತ್ತು ವಿವರವನ್ನು ಚುನಾವಣಾ ಆಯೋಗದ ಅಧಿಕೃತ ಅಂತರಜಾಲ ತಾಣಗಳಾದ Voters Service Portal: https://voters.eci.gov.in/ ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕ ಇವರ ಜಾಲತಾಣ ಛಿಜಠಿಞಚಿಡಿಟಿಚಿಣಚಿಞಚಿ. ರಿಠಚಿ.ಟಿ ಹಾಗೂ ವಿಜಯಪುರ ಜಿಲ್ಲಾ ವೆಬ್ ಪೋರ್ಟಲ್ https://vijayapura.nic.in/en/ ವೀಕ್ಷಿಸಬಹುದಾಗಿದೆ.

ಯಾವುದೇ ಅಗತ್ಯ ಮಾಹಿತಿ, ಸಲಹೆಗಳನ್ನು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸ್ಥಾಪಿಸಲಾಗಿರುವ ಜಿಲ್ಲಾ ಮತದಾರರ ಸಹಾಯವಾಣಿ: 1950 ಸಂಖ್ಯೆಗೆ ಕರೆ ಮಾಡಿ ಮಾಹಿತಿ ಪಡೆಯಬಹುದಾಗಿದೆ ಎಂದು ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ಅನಾಹುತಕ್ಕೆ ಆಹ್ವಾನ ನೀಡುತ್ತಿರುವ ಶೀರನಹುಂಡಿ ಹಳೆ ಸೇತುವೆಗಳು

### ಸೇತುವೆ ದುರಸ್ತಿಗೊಳಿಸದಿದ್ದರೆ ಗ್ರಾಮಸ್ಥರಿಂದ ಉಗ್ರ ಹೋರಾಟದ ಎಚ್ಚರಿಕೆ

■ ಉದಯರಶ್ಮಿ ದಿನಪತ್ರಿಕೆ

ಎಚ್ ಡಿ ಕೋಟೆ: ಕಳೆದ ಹಲವು ವರ್ಷಗಳಿಂದ ಶಿಥಿಲಾವಸ್ಥೆಗೆ ತಲುಪಿ ಒಂದು ಕಡೆಯಿಂದ ಕುಸಿಯುತ್ತಾ ಬರುತ್ತಿರುವ, ಅನೇಕ ಅನಾಹುತಗಳಿಗೆ ಕಾರಣವಾಗಿರುವ, ನಾಲ್ಕೈದು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಗ್ರಾಮದಲ್ಲಿರುವ ಕಿರಿದಾದ ಎರಡು ಸೇತುವೆಗಳನ್ನು ದುರಸ್ತಿಗೊಳಿಸದಿದ್ದರೆ, ಸಂಬಂಧಪಟ್ಟ ಇಲಾಖೆ ಕಚೇರಿ ಎದುರು ಧರಣಿ ನಡೆಸಲು ಶೀರನಹುಂಡಿ ಗ್ರಾಮಸ್ಥರು ಮುಂದಾಗಿದ್ದಾರೆ.

ತಾಲೂಕಿನ ಶೀರನಹುಂಡಿ ಗ್ರಾಮದ ಬಳಿ ಎರಡು ಕಿರಿದಾದ ಸೇತುವೆಗಳಿವೆ.

> "ಶೀರನಹುಂಡಿ ಗ್ರಾಮದ ರೈತರು ಜಮೀನುಗಳಿಗೆ ತೆರಳಲು ತಾರಕ
>
> ಬಲದಂಡೆ ನಾಲೆಯ ಮುಖಾಂತರವೇ ಹಾದುಹೋಗಬೇಕಾಗಿದೆ. ಆದರೆ ಸೇತುವೆಗಳು ಆಗಲೋ ಈಗಲೋ ಬೀಳುವ ಸ್ಥಿತಿಯಲ್ಲಿದ್ದು, ಶಾಲಾ ಮಕ್ಕಳಿಗೂ ಕೂಡ ತುಂಬಾ ತೊಂದರೆಯಾಗಿದೆ. ಸೇತುವೆ ರಸ್ತೆ ಬಹಳ ಕಿರಿದಾಗಿರುವುದರಿಂದ ಊರಿನೊಳಗೆ ಸಾರಿಗೆ ಬಸ್ ಕೂಡ ಬರುತ್ತಿಲ್ಲ."
>
> ■ ಕೆಂಡಗಣಸ್ವಾಮಿ ಎಸ್ ಪಿ



ಒಂದು ಸೇತುವೆ ಶೀರನಹುಂಡಿಯಿಂದ ನಾಗನಹಳ್ಳಿ, ಮಾಚನಾಯಕನಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸಿದರೆ, ಮತ್ತೊಂದು ಸೇತುವೆ, ಮೈಸೂರು-ಮಾನಂದವಾಡಿ (ಅಂತರಸಂತೆ)ಮುಖ್ಯರಸ್ತೆಗೆ ಸಂಪರ್ಕ ಕಲ್ಪಿಸುತ್ತದೆ. ಅಲ್ಲದೆ ಈ ಎರಡು ಸೇತುವೆಗಳ ಮೂಲಕವೇ ಕೆಎಸ್ ಆರ್ ಟಿಸಿ ಬಸ್ ಸೇರಿದಂತೆ ವಾಹನಗಳು ಓಡಾಡುತ್ತವೆ. ಆದರೆ ಈ ಎರಡು ಸೇತುವೆಗಳು ಬಹಳ ಹಳೆಯದಾಗಿದ್ದು, ಬಹಳ ಕಿರಿದಾಗಿದ್ದು ಕುಸಿಯುತ್ತಾ ಬರುತ್ತಿದೆ. ಸೇತುವೆಗೆ ಅಡ್ಡಲಾಗಿರುವ ತಡೆಗೋಡೆ ಕೂಡ ಕುಸಿದು ಬಿದ್ದಿದ್ದು, ಜನರು ಜೀವ ಭಯದಲ್ಲೇ ಓಡಾಡಬೇಕಾಗಿದೆ. ರಾತ್ರಿ ವೇಳೆ ವಾಹನ ಸವಾರರು ಈ ಸೇತುವೆಗಳ ಮೇಲೆ ಸಂಚರಿಸಲು ಹಿಂದೇಟು ಹಾಕುತ್ತಾರೆ. ಒಂದು ಕ್ಷಣ ಎಚ್ಚರ ತಪ್ಪಿದ್ರೆ ಅಪಾಯ ಕಟ್ಟಿಟ್ಟ ಬುತ್ತಿ. ಆದರೆ ಪರ್ಯಾಯ ಮಾರ್ಗವಿಲ್ಲದೆ ಈ ಸೇತುವೆಗಳ ಮೂಲಕವೇ ಶೀರನಹುಂಡಿ ಗ್ರಾಮಸ್ಥರು ಜಮೀನುಗಳಿಗೆ, ಪಕ್ಕದ ಗ್ರಾಮಗಳಿಗೆ ಹೋಗಬೇಕಾಗಿದೆ. ಅಲ್ಲದೆ ರಸ್ತೆಗಳು ಕೂಡ ಹದಗೆಟ್ಟಿದ್ದು, ಶಾಪ ಹಾಕಿಕೊಂಡೆ ಓಡಾಡುವಂತಾಗಿದೆ.

ಸುಂದ್ರೇಶ್, ಕೆಂಡಗಣಸ್ವಾಮಿ ಎಸ್ ಪಿ , ರಂಗರಾಜೇಗೌಡ, ಪುಟ್ಟೇಗೌಡ, ಮಂಜುನಾಥ, ಚಂದ್ರಶೇಖರ್ ಎಸ್ ಎನ್, ಮಾದೇವ, ಸಂತೋಷ್ ಕುಮಾರ್, ಶ್ರೀನಿವಾಸ, ಲಿಂಗರಾಜು, ಮಂಜು ಎಸ್, ನಾಗರಾಜು ಎಲ್, ನಿಂಗರಾಜು ಬಿ. ಸೇರಿದಂತೆ ಗ್ರಾಮದ ಯಜಮಾನವರು, ಮುಖಂಡರು, ಯುವಕರು ಇದ್ದರು.

**ಮನವಿಗೆ ಕ್ಯಾರೆ ಎನ್ನದ ಜನಪ್ರತಿನಿಧಿಗಳು & ಅಧಿಕಾರಿಗಳು**

ಅನಾಹುತಕ್ಕೆ ಆಹ್ವಾನ ನೀಡುತ್ತಿರುವ ಸೇತುವೆಗಳನ್ನು ದುರಸ್ತಿಗೊಳಿಸುವಂತೆ ಗ್ರಾಮಸ್ಥರು, ಅನೇಕ ಬಾರಿ ಸಂಬಂಧಪಟ್ಟ ಇಲಾಖೆಗಳಿಗೆ ಮನವಿ ಪತ್ರ ಸಲ್ಲಿಸಿದ್ದಾರೆ. ಶಾಸಕ ಅನಿಲ್ ಚಿಕ್ಕಮಾದು, ಸಂಸದ ಸುನಿಲ್ ಬೋಸ್ ಅವರ ಗಮನಕ್ಕೂ ಕೂಡ ತರಲಾಗಿದೆ. ಮನವಿ ಪತ್ರ ಸ್ವೀಕರಿಸಿ ಅಧಿಕಾರಿಗಳು ಸುಮ್ಮನಾದರೆ, ಶಾಸಕರು, ಸಂಸದರು, ದುರಸ್ತಿಗೊಳಿಸುವುದಾಗಿ ಭರವಸೆ ಕೊಡುತ್ತಾರೋ ಹೊರತು, ಕಾರ್ಯರೂಪಕ್ಕೆ ತರುವ ಪ್ರಯತ್ನ ಮಾಡಿಲ್ಲ. ಹೀಗಾಗಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡೋದಾಗಿ ವಕೀಲರೂ ಆದ ಸುಂದ್ರೇಶ್ ಎಚ್ಚರಿಕೆ ನೀಡಿದ್ದಾರೆ.

## ಶೈಕ್ಷಣಿಕ ಸಾಲಕ್ಕಾಗಿ ಆನ್ ಲೈನ್ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ:2026-27ನೇ ಸಾಲಿನಲ್ಲಿ ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮದಿಂದ ಅರಿವು ಶೈಕ್ಷಣಿಕ ಸಾಲ ಯೋಜನೆಯಡಿ ಶೈಕ್ಷಣಿಕ ಸಾಲಕ್ಕಾಗಿ ಕ್ರಿಶ್ಚಿಯನ್ ಜನಾಂಗಕ್ಕೆ ಸೇರಿದ ಸಿಇಟಿ, ನೀಟ್ ಹಾಗೂ ಜೆಇಇ ಮೂಲಕ ಆಯ್ಕೆಯಾದ ಎಂಬಿಬಿಎಸ್, ಎಂಡಿ, ಎಂ.ಎಸ್ ಕೋರ್ಸ್ ಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಂದ ಆನ್ ಲೈನ್ ಅರ್ಜಿ ಆಹ್ವಾನಿಸಲಾಗಿದೆ. ಸರ್ಕಾರಿ, ಕಾಲೇಜು, ಖಾಸಗಿ, ಮ್ಯಾನೇಜ್‌ಮೆಂಟ್ ಕೋಟಾದಡಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಗರಿಷ್ಠ 5 ಲಕ್ಷಗಳವರೆಗೆ ಸಾಲ ಸೌಲಭ್ಯ ಒದಗಿಸಲಾಗುತ್ತಿದ್ದು, ವೃತ್ತಿಪರ ಕೋರ್ಸಗಳಾದ ಎಂ.ಟಿ.ಟಿ.ಎಸ್. ಎಂ.ಡಿ. ಬಿ.ಡಿ.ಎಸ್. ಟಿ.ಆಯುಷ್, ಎಂ.ಆಯುಷ್. ಬಿ.ಇ. ಬಿ.ಟೆಕ್. ಅಗ್ರಿಕಲ್ಚರ್ ಇಂಜಿನೀಯರಿಂಗ್, ಡೈರಿ ಟೆಕ್ನಾಲಜಿ, ಫೋರೆಸ್ಟ್ರಿ, ವೆಟೆರ್‌ನರಿ ಹಾಗೂ ಅನಿಮಲ್ ಸೈನ್ಸಿಸ್, ಫುಡ್ ಟೆಕ್ನಾಲಜಿ, ಬೈಯೋಟಕ್ನಾಲಜಿ, ಫಿಶರೀಸ್, ಸೆರಿಕಲ್ಚರ್, ಹೋಂ/ ಕಮ್ಯುನಿಟಿ ಸೈನ್ಸಿಸ್. ಫುಡ್ ನ್ಯೂಟ್ರಿಷನ್ & ಡೈಯಾಟೆಟಿಕ್ಸ್, ಬಿ.ಫಾರ್ಮಾ, ಎಂ.ಫಾರ್ಮಾ, ಫಾರ್ಮಾ.ಡಿ, ಡಿ.ಫಾರ್ಮಾ ಈ ಕೋರ್ಸಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಆನ್ ಲೈನ್ ಮೂಲಕ ಅರಿವು ವಿದ್ಯಾಭ್ಯಾಸ ಸಾಲಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮ, ಮೌಲಾನಾ ಆಝಾದ ಭವನ, ಜಿಲ್ಲಾ ಪಂಚಾಯತ್ ರಸ್ತೆ, ಕನಕದಾಸ ಬಡಾವಣೆ. ದೂರವಾಣಿ ಸಂಖ್ಯೆ: 08352 278344 ಸಂಪರ್ಕಿಸಬಹುದಾಗಿದೆ ಎಂದು ಕೆಸಿಸಿಡಿಸಿ ವ್ಯವಸ್ಥಾಪಕರ ಪ್ರಕಟಣೆ ತಿಳಿಸಿದೆ.

## ಸತ್ಯಾತ್ಮತೀರ್ಥ ಶ್ರೀಪಾದಂಗಳ ಆಗಮನ ಇಂದು

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಪಟ್ಟಣಕ್ಕೆ ಇಂದು ಮಂಗಳವಾರ ಮದುತ್ತರಾದಿ ಮಠದ ಶ್ರೀಸತ್ಯಾತ್ಮತೀರ್ಥ ಪಾದಂಗಳರವರು ಆಗಮಿಸಲಿದ್ದಾರೆ.

ಪಟ್ಟಣದಲ್ಲಿ ಶ್ರೀಮೂಲರಾಮ ದೇವರ ಪೂಜಾ ಮಹೋತ್ಸವ ಅಂಗವಾಗಿ ಆಗಮಿಸುವ ಶ್ರೀಗಳು ವಿಜಯಪುರ ರಸ್ತೆಯ ಗೌರೀಶಂಕರ ನಗರದ ವರ್ಕಾನಳ್ಳಿ ವಿನಾಯಕ ಪಾಟೀಲ ಅವರ ತೋಟದ ಮನೆಯಲ್ಲಿ ಬೆಳಿಗ್ಗೆ ಪಾದಪೂಜೆ ನಂತರ ಸಪ್ತಮುದ್ರಾಧಾರಣೆ ಆನಂತರ ಮೂಲರಾಮದೇವರ ಪೂಜೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಪೂಜೆಯನಂತರತೀರ್ಥಪ್ರಸಾದವಿತರಣೆಯಾಗಲಿದೆ.



ಕೊನೆಯಲ್ಲಿ ಶ್ರೀಗಳಿಂದ ಫಲಮಂತ್ರಾಕ್ಷತೆಹಾಗೂಆಶೀರ್ವಚನ ಜರುಗಲಿದೆ. ಈ ಎಲ್ಲ ಕಾರ್ಯಗಳಲ್ಲಿ ಪಟ್ಟಣ ಸೇರಿದಂತೆ ತಾಲ್ಲೂಕಿನ ಎಲ್ಲ ವಿಪ್ರ ಸಮುದಾಯದವರು ಪಾಲ್ಗೊಳ್ಳುವಂತೆ ಶ್ರೀಚಿದಂಬರ ಸೇವಾ ಸಮಿತಿ ಅಧ್ಯಕ್ಷ ನರೇಂದ್ರ ನಾಡಗೌಡ ಹಾಗೂ ವಿನಾಯಕ ಪಾಟೀಲ (ವರ್ಕಾನಳ್ಳಿ) ಪ್ರಕಟಣೆ ಮೂಲಕ ತಿಳಿಸಿದ್ದಾರೆ.

## ತಂಬಾಕು ಮಾರಾಟ ಮಳಿಗೆಗಳ ಮೇಲೆ ದಾಳಿ

■ ಉದಯರಶ್ಮಿ ದಿನಪತ್ರಿಕೆ

**ಮುದ್ದೇಬಿಹಾಳದಲ್ಲಿ 12 ಪ್ರಕರಣ ದಾಖಲು | ರೂ.2,300 ದಂಡ ವಸೂಲಿ**

ಮುದ್ದೇಬಿಹಾಳ: ತಂಬಾಕು ನಿಯಂತ್ರಣಕ್ಕೆ ತಾಲೂಕಿನ ಕುಂಟೋಜಿ ಗ್ರಾಮದಲ್ಲಿ ಆರೋಗ್ಯ ಇಲಾಖೆಯ ನೇತೃತ್ವದಲ್ಲಿ ತಂಬಾಕು ನಿಯಂತ್ರಣ ಕೋಶ ಹಾಗೂ ತಾಲೂಕು ತಂಬಾಕು ತನಿಖಾ ದಳದ ಸದಸ್ಯರು ಕೊಟ್ಪಾ ಕಾಯ್ದೆಯಡಿ ವಿಶೇಷ ದಾಳಿ ನಡೆಸಿ, ನಿಯಮ ಉಲ್ಲಂಘಿಸಿದ ಅಂಗಡಿ ಮಾಲೀಕರ ವಿರುದ್ಧ 12 ಪ್ರಕರಣಗಳನ್ನು ದಾಖಲಿಸಿ ಒಟ್ಟು ರೂ. 2,300 ದಂಡ ವಸೂಲಿ ಮಾಡಿದ್ದಾರೆ.

ಗ್ರಾಮದ ಮುಖ್ಯರಸ್ತೆಯಿಂದ ಬಸವೇಶ್ವರ ದೇವಸ್ಥಾನದವರೆಗೆ ಹಾಗೂ ಮುದ್ದೇಬಿಹಾಳ ರಸ್ತೆಯಲ್ಲಿರುವ ಚಹಾ ಅಂಗಡಿಗಳು ಸೇರಿದಂತೆ ವಿವಿಧ ವ್ಯಾಪಾರ ಮಳಿಗೆಗಳ ಮೇಲೆ ದಾಳಿ ನಡೆಸಿದ ಅಧಿಕಾರಿಗಳು, ತಂಬಾಕು ಉತ್ಪನ್ನಗಳ ಮಾರಾಟಕ್ಕೆ ಸಂಬಂಧಿಸಿದ ನಿಯಮಗಳನ್ನು ಉಲ್ಲಂಘಿಸಿದ ಅಂಗಡಿಗಳ ವಿರುದ್ಧ ಕ್ರಮ ಕೈಗೊಂಡಿದ್ದಾರೆ.

ದಾಳಿಯ ವೇಳೆ ಸಾರ್ವಜನಿಕರಿಗೆ ತಂಬಾಕು ಸೇವನೆಯ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸಿ, ಅಂಗಡಿ ಮಾಲೀಕರು ಹಾಗೂ ವ್ಯಾಪಾರಸ್ಥರಿಗೆ ಕೊಟ್ಪಾ ಕಾಯ್ದೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಚ್ಚರಿಕೆ ಸಹ ನೀಡಿದ್ದಾರೆ.

ಈ ವೇಳೆ ಕಾಯ್ದೆಯ ಸೆಕ್ಷನ್ 4 ಹಾಗೂ 6(ಎ) ಅನ್ವಯ ಕಡ್ಡಾಯವಾಗಿ ಅಳವಡಿಸಬೇಕಾದ ಎಚ್ಚರಿಕೆ ನಾಮಫಲಕಗಳನ್ನು ಅಳವಡಿಸಿ, ಅನಧಿಕೃತ ತಂಬಾಕು ಜಾಹೀರಾತು ಫಲಕಗಳನ್ನು ತೆರವುಗೊಳಿಸಿದ್ದಾರೆ. ಆರೋಗ್ಯ ಇಲಾಖೆ ಗ್ರಾಮದಲ್ಲಿ ಏಕಕಾಲಕ್ಕೆ ವಿವಿಧ ಸ್ಥಳಗಳಲ್ಲಿ ಪರಿಶೀಲನೆ ನಡೆಸಿ, ನಿಯಮಗಳ ಉಲ್ಲಂಘನೆ ಕಂಡುಬಂದ ಕಡೆಗಳಲ್ಲಿ ಪ್ರಕರಣ ದಾಖಲಿಸಿದ್ದಾರೆ.

ದಾಳಿಯಲ್ಲಿ ಗರಸಂಗಿ ಪ್ರಾಥಮಿಕ ಆರೋಗ್ಯ ಕೇಂದ್ರದ ಮೇಲ್ವಿಚಾರಕ ಎಂ.ಎಸ್. ಗೌಡರ, ಆರೋಗ್ಯ ನಿರೀಕ್ಷಣಾಧಿಕಾರಿ ಎಸ್.ಬಿ. ಹೂಗಾರ, ಕುಂಟೋಜಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗಿರೀಶ ಬಿರಾದಾರ, ಆಶಾ ಕಾರ್ಯಕರ್ತೆಯರಾದ ಯಲ್ಲಮ್ಮ ಹೊಸಮನಿ ಹಾಗೂ ರೇಣುಕಾ ತಾಂಬ್ರಳ್ಳಿ ಸೇರಿದಂತೆ ಆರೋಗ್ಯ ಇಲಾಖೆಯ ಸಿಬ್ಬಂದಿ ಭಾಗವಹಿಸಿದ್ದರು.

# ಶಿರಸಂಗಿ ಲಿಂಗರಾಜ ಮಹಾರಾಜರು ಎರಡನೇ ಬಸವಣ್ಣ

### ವಿಜಯಪುರದಲ್ಲಿ ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ ಅಭಿಮತ

■ ಉದ್ದೇಶ ದಿನಪತ್ರಿಕೆ



ವಿಜಯಪುರ: ಶಿಕ್ಷಣದಿಂದ ಪ್ರತಿಯೊಬ್ಬರ ಬದುಕು ಬೆಳಗಲು ತಮ್ಮ ಸಂಪತ್ತನ್ನೇ ತ್ಯಾಗ ಮಾಡಿದ ತ್ಯಾಗವೀರ ಶಿರಸಂಗಿ ಲಿಂಗರಾಜ ಮಹಾರಾಜರು ಎರಡನೇಯ ಬಸವಣ್ಣ ಎಂದು ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ ಹೇಳಿದರು.

ಶಿರಸಂಗಿ ಲಿಂಗರಾಜ ವಿವಿಧೋದ್ದೇಶ ಸಂಸ್ಥೆ, ಶ್ರೀಮತಿ ಕಮಲಾಬಾಯಿ ಬಸನಗೌಡ ಪಾಟೀಲ ಚಾರಿಟೇಬಲ್ ಟ್ರಸ್ಟ್, ಶಿರಸಲಿಂಗ ಲಿಂಗರಾಜ ಪತ್ತಿನ ಸಹಕಾರ ಸಂಘ, ಲಿಂಗಾಯತ ಕುಡು ಒಕ್ಕಲಿಗ ನೌಕರರ ಕ್ಷೇಮಾಭಿವೃದ್ಧಿ ವೇದಿಕೆ, ವಿಜಯಪುರ, ಬಾಗಲಕೋಟೆ ಹಾಗೂ ಅಥಣಿ ಕುಡು ಒಕ್ಕಲಿಗ ಸಮುದಾಯದ ಸಹಯೋಗದಲ್ಲಿ ವಿಜಯಪುರದ ಅಥಣಿ ರಸ್ತೆಯಲ್ಲಿರುವ ಶ್ರೀ ಜಿ.ಕೆ. ಪಾಟೀಲ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ತ್ಯಾಗವೀರ ಶಿರಸಂಗಿ ಮಹಾರಾಜರ ಹೆಸರಿನಲ್ಲಿ ಪ್ರಸಕ್ತ ವರ್ಷದ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ತ್ಯಾಗವೀರ ಶಿರಸಿಂಗ ಲಿಂಗರಾಜ ಮಹಾರಾಜರು ಶಿಕ್ಷಣ ಪ್ರಸಾರಕ್ಕೆ ನೀಡಿದ ಕೊಡುಗೆ ಅಮೋಘ, ತಮ್ಮ ಮಹೋನ್ನತ ವಿಚಾರಧಾರೆ, ದೂರದೃಷ್ಟಿಯ ಫಲವಾಗಿ ತಮ್ಮ ಇಡೀ ಸಂಪತ್ತನ್ನೇ ದಾನ ಮಾಡಿ ಶಿಕ್ಷಣ ಸಂಸ್ಥೆಗಳಿಗೆ ಧಾರೆ ಎರೆದರು. ಹೀಗಾಗಿ ವಿದ್ಯಾರ್ಥಿಗಳು ಈ ಮಹಾನ್ ಚಿಂತಕ ಶಿರಸಂಗಿ ಲಿಂಗರಾಜ ಮಹಾರಾಜರ ಆದರ್ಶಗಳನ್ನು ಮೈಗೂಡಿಸಿಕೊಂಡು ಮುನ್ನಡೆಯಬೇಕು ಎಂದು ಕರೆ ನೀಡಿದರು.

ವಿಧಾನ ಪರಿಷತ್ ಸದಸ್ಯ ಸುನೀಲಗೌಡ ಪಾಟೀಲ ಮಾತನಾಡಿ, ಪ್ರತಿಭೆಗೆ ಪ್ರೋತ್ಸಾಹ ಅಗತ್ಯ, ಕುಡುಒಕ್ಕಲಿಗ ಸಮಾಜದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಆಶೀರ್ವದಿಸುತ್ತಿರುವುದು ಸಂತೋಷದ ಸಂಗತಿ, ಈ ಬಾರಿ ನೆರೆಯ ಬಾಗಲಕೋಟೆ, ಅಥಣಿ ಭಾಗದ ಮಕ್ಕಳಿಗೂ ಪ್ರತಿಭಾ ಪುರಸ್ಕಾರ ನೀಡುತ್ತಿರುವುದು ಸಂತೋಷದ ಸಂಗತಿ, ವಿದ್ಯಾರ್ಥಿಗಳ ಬೆಳವಣಿಗೆಯಲ್ಲಿ ಶಿಕ್ಷಕರ ಮಾರ್ಗದರ್ಶನ ಅಗತ್ಯವಾಗಿ ಬೇಕು, ಸಮಾಜದ ಪ್ರಮುಖರು ಸಮಾಜ ಕಟ್ಟುವ ಕಾರ್ಯ, ಪ್ರತಿಭಾ ಪುರಸ್ಕಾರಗಳಿಗೆ ಹೆಚ್ಚಿನ ರೂಪದಲ್ಲಿ ನೆರವಾಗಿ, ಬೆನ್ನೆಲುಬಾಗಿ ನಿಲ್ಲಬೇಕು ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ವಿಧಾನ ಪರಿಷತ್ ಮಾಜಿ ಸದಸ್ಯ ಜಿ.ಕೆ. ಪಾಟೀಲ ಮಾತನಾಡಿ, ಪ್ರತಿಭೆ ಎನ್ನುವುದು ಜನ್ಮದಿಂದ ಬಂದ ಗುಣ, ಪಾಂಡಿತ್ಯ ಎನ್ನುವುದು ಸತತ ಅಧ್ಯಯನ, ಕಠಿಣ ಪರಿಶ್ರಮದಿಂದ ಲಭಿಸುತ್ತದೆ, ಪ್ರತಿಭೆಯನ್ನು ಪೋಷಿಸಿ ಬೆಳೆಸುವುದು ಶಿಕ್ಷಕರ ಹಾಗೂ ಪಾಲಕರ ಆದ್ಯ ಜವಾಬ್ದಾರಿ ಎಂದರು.

ಇಂಡಿ-ಕವಲಗಿಯ ಶ್ರೀ ಸಿದ್ಧರಾಮೇಶ್ವರ ಸಂಸ್ಥಾನಮಠದ ಶ್ರೀ ಡಾ.ಅಭಿನವ ಸಿದ್ಧರಾಮೇಶ್ವರ ಮಹಾಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಅಣ್ಣಾಸಾಹೇಬಗೌಡ ಪಾಟೀಲ ಉಕ್ಕಲಿ, ಕಲ್ಲನಗೌಡ ಕೆ ಪಾಟೀಲ ತೊರವಿ, ಆರ್.ಎಸ್ ಜನಗೊಂಡ, ಭಾಗಪ್ಪಗೌಡ ಪಾಟೀಲ, ಮಲ್ಲನಗೌಡ ಪಾಟೀಲ, ಆನಂದ ಖೇಡ, ಶೇಖರ ಜಲಪುರೆ, ಮಮತಾ ಬನ್ನೂರ, ಎಸ್ ಎ ಬಿರಾದಾರ ಕನ್ನಾಳ, ಪಾಲ್ಗೊಂಡಿದ್ದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR